
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಪುಟ : 37 ಸಂಚಿಕೆ : 16 ಮನ್ಮಥ–ಮೀನ ಕಲಿಯುಗಾಬ್ದ 5117 1–4–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ವೈದ್ಯಕೀಯ ಸೇವೆ, ಗುಣಮಟ್ಟದ ಶಿಕ್ಷಣ ಸರ್ವರಿಗೂ ಕೈಗೆಟುಕಬೇಕು: ಆರೆಸ್ಸೆಸ್ ಆಗ್ರಹ

**ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ನಿರ್ಧಾರಗಳನ್ನು ನಿರೂಪಿಸುವ ಮಹತ್ವದ ವಾರ್ಷಿಕ ಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭಾ (ABPS) ಮಾರ್ಚ್ 11, 12 ಮತ್ತು 13, 2016 ರಂದು ರಾಜಸ್ಥಾನದ ನಾಗೌರ್ ಬಳಿಯ ಶಾರದಾಪುರಂನ ಶಾರದಾ ಬಾಲನಿಕೇತನ ವಿದ್ಯಾಮಂದಿರದ ವಿಶಾಲ ಪರಿಸರದಲ್ಲಿ ನಡೆಯಿತು. ಸಮಾಜ ಜೀವನವನ್ನು ಪ್ರಭಾವಿಸುವ ಮೂರು ಮಹತ್ವದ ನಿರ್ಣಯಗಳನ್ನು ಅಖಿಲ ಭಾರತೀಯ ಪ್ರತಿನಿಧಿ ಸಭೆ ಚರ್ಚಿಸಿ ಅಂಗೀಕರಿಸಿತು. ಇದೇ ವೇಳೆ ಇತ್ತೀಚೆಗೆ ಸುದ್ದಿಯಲ್ಲಿರುವ ಹಾಗೂ ದೇಶದ ಗಮನ ಸೆಳೆದ ನಾಲ್ಕು ವಿಷಯಗಳ ಕುರಿತು ಸಂಘದ ನಿಲುವನ್ನು ತಿಳಿಸಲಾಯಿತು. ಇವುಗಳ ಸಾರಾಂಶವನ್ನು ಇಲ್ಲಿ ನೀಡಲಾಗಿದೆ.**




## ನಿರ್ಣಯ–1
## ಪರಿಣಾಮಕಾರಿ ಆರೋಗ್ಯ ಸೇವೆ ಮತ್ತು ಕೈಗೆಟಕುವ ವೈದ್ಯಕೀಯ ಸೇವೆ ಅಗತ್ಯ

ಆರೋಗ್ಯಪೂರ್ಣ ಜೀವನಶೈಲಿಯನ್ನು ಅನುಸರಿಸುವುದು ಮತ್ತು ಸಾಮಾನ್ಯ ಜನರಿಗೆ ವೈದ್ಯಕೀಯ ಸೇವೆಗಳನ್ನು ಲಭ್ಯವಾಗಿಸುವುದು ಅತ್ಯಂತ ಅವಶ್ಯ. ಅದರಿಂದ ಎಲ್ಲ ನಾಗರಿಕರಿಗೆ ಆರೋಗ್ಯಪೂರ್ಣ ಹಾಗೂ ರೋಗಮುಕ್ತ ಜೀವನ ಸಿಕ್ಕಿದಂತಾಗುತ್ತದೆ. ಇಂದು ಅನಾರೋಗ್ಯಕರ ಜೀವನ ಶೈಲಿಗಳಿಂದಾಗಿ ರೋಗಗಳು ತುಂಬ ವೇಗವಾಗಿ ಬೆಳೆಯುತ್ತಿವೆ. ಚಿಕಿತ್ಸೆಯು ದುಬಾರಿಯಾದ ಕಾರಣ ಅದು ಜನಸಾಮಾನ್ಯರ ಕೈಗೆ ಎಟುಕುತ್ತಿಲ್ಲ. ಪರಿಣಾಮವಾಗಿ, ಬಹಳಷ್ಟು ಕುಟುಂಬಗಳು ಸಾಲದಲ್ಲಿ ಮುಳುಗಿ ಹೋಗುತ್ತಿವೆ; ಅಥವಾ ಕುಟುಂಬದಲ್ಲಿ ದುಡಿಯುವವರು ರೋಗಕ್ಕೆ ಸಿಲುಕಿದ ಕಾರಣ ಜೀವನ ನಿರ್ವಹಣೆಯೇ ಕಷ್ಟಕ್ಕೆ ಗುರಿಯಾಗುತ್ತಿದೆ ಎಂದು ಎಬಿಪಿಎಸ್ ಕಳವಳವನ್ನು ವ್ಯಕ್ತಪಡಿಸಿದೆ.

ಆರೋಗ್ಯವು ಉತ್ತಮವಾಗಿರಬೇಕಿದ್ದರೆ ಆರೋಗ್ಯಪೂರ್ಣವಾದ ಆಹಾರ, ಜೀವನಕ್ರಮ ಮತ್ತು ಜೀವನ ಶೈಲಿ, ಅದರೊಂದಿಗೆ ಸನ್ನಡತೆ, ಆಧ್ಯಾತ್ಮಿಕತೆ, ಯೋಗ, ದೈನಂದಿನ ವ್ಯಾಯಾಮ ಹಾಗೂ ಸ್ವಚ್ಛತೆ – ಇವುಗಳಿಗೆ ಮಹತ್ವ ನೀಡಲೇಬೇಕು. ಮಕ್ಕಳಿಗೆ ಸಕಾಲದಲ್ಲಿ ಲಸಿಕೆ ಹಾಕಿಸಬೇಕು. ಎಲ್ಲ ಬಗೆಯ ಅಮಲು (ಮಾದಕ) ಪದಾರ್ಥಗಳಿಂದ ಸಮಾಜ ದೂರವಿರುವುದು ಕೂಡ ತೀರಾ ಅವಶ್ಯ. ಈ ನಿಟ್ಟಿನಲ್ಲಿ ಸ್ವಯಂಸೇವಕರು ಸೇರಿದಂತೆ ಪ್ರಜ್ಞಾವಂತರಾದ ಎಲ್ಲ ನಾಗರಿಕರು ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಬೇಕು.

ವೈದ್ಯಕೀಯ ಸವಲತ್ತುಗಳು ದೊಡ್ಡ ಪಟ್ಟಣ–ನಗರಗಳಲ್ಲಿ ಕೇಂದ್ರೀಕೃತವಾಗಿರುವ ಕಾರಣ, ದೂರದ ಊರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅವುಗಳ ಕೊರತೆ ಉಂಟಾಗಿದೆ. ವೈದ್ಯಕೀಯ ಸವಲತ್ತುಗಳು ಮತ್ತು ವೈದ್ಯಕೀಯ ಸಿಬ್ಬಂದಿಗಳ ಕೊರತೆಯಿಂದಾಗಿ ಬಹಳಷ್ಟು ಜನ ಅದರಿಂದ ವಂಚಿತರಾಗಿದ್ದಾರೆ; ಆಸ್ಪತ್ರೆಗಳ ಪ್ರವೇಶ, ರೋಗ ಪರೀಕ್ಷೆ ಮತ್ತು ಚಿಕಿತ್ಸೆಗೆ ಜನ ಸಾಲುಗಟ್ಟಿ ನಿಂತಿರುತ್ತಾರೆ. ವೈದ್ಯಕೀಯ ಸೇವೆಯ ವೆಚ್ಚ ವಿಪರೀತವಾಗಿ ಜನರ ಕೈಗೆಟುಕುತ್ತಿಲ್ಲ; ಸೇವೆಯ ಗುಣಮಟ್ಟ ಕಳಪೆಯಾಗಿದೆ ಮತ್ತು ಅದರ ವಿಶ್ವಾಸಾರ್ಹತೆ ಕುಸಿದಿದೆ. ಇದು ಸರಿಯಲ್ಲ; ಗುಣಮಟ್ಟದ ವೈದ್ಯಕೀಯ ಸೇವೆ ಎಲ್ಲ ನಾಗರಿಕರಿಗೆ ಲಭ್ಯವಾಗಬೇಕು; ಮಹಿಳೆಯರು ಮತ್ತು ಮಕ್ಕಳ ಬಗ್ಗೆ ವಿಶೇಷ ಗಮನ ಅಗತ್ಯ. ಅದಕ್ಕಾಗಿ ಎಲ್ಲ ರೀತಿಯ ಮತ್ತು ಪದ್ಧತಿಗಳ ವೈದ್ಯಕೀಯ ಸೇವೆಗಳನ್ನು ದೇಶಾದ್ಯಂತ ವಿಸ್ತರಿಸಬೇಕು; ಗ್ರಾಮೀಣ ಹಾಗೂ ಬುಡಕಟ್ಟು ಪ್ರದೇಶಗಳಿಗೆ ವಿಶೇಷ ಗಮನ ನೀಡಬೇಕು. ಅದಲ್ಲದೆ ನಿರಂತರ ಚಿಕಿತ್ಸೆ ಮತ್ತು ತಜ್ಞರ ಸಲಹೆ ಪಡೆಯುವ ಸಲುವಾಗಿ ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.

ವಿವಿಧ ಸಾಮಾಜಿಕ, ಧಾರ್ಮಿಕ ಮತ್ತು ಸಮುದಾಯಗಳ ಸಂಘಟನೆಗಳು ಉಚಿತವಾಗಿ ಹಾಗೂ ಜನಾನುರಾಗದ ನೆಲೆಯಲ್ಲಿ ದೇಶಾದ್ಯಂತ ನಡೆಸುವ ಆಸ್ಪತ್ರೆಗಳು ಸಮಾಜದಲ್ಲಿನ ಜನಸಾಮಾನ್ಯರಿಗೆ ಅತ್ಯಂತ ಪರಿಣಾಮಕಾರಿಯಾದ ಮತ್ತು ಯೋಗ್ಯವಾದ ಚಿಕಿತ್ಸೆಯನ್ನೇ ನೀಡುತ್ತಿವೆ. ಅನುಕರಣ ಯೋಗ್ಯವಾದ ಅಂತಹ ಪ್ರಯತ್ನಗಳಿಗೆ ಸರ್ಕಾರ ನೆರವಿನ ಹಸ್ತವನ್ನು ಚಾಚಬೇಕು ಎಂದಿರುವ ಪ್ರತಿನಿಧಿ ಸಭೆ, ಅಂತಹ ಪ್ರಯತ್ನಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದೆ; ಹಾಗೂ ದೇಶದ ಕೈಗಾರಿಕಾ ಸಮೂಹಗಳು ಮತ್ತು ದತ್ತಿ ಸಂಸ್ಥೆಗಳು ಈ ದಿಕ್ಕಿನಲ್ಲಿ ಇನ್ನಷ್ಟು ಮುಂದೆ ಬರಬೇಕೆಂದು ಸಲಹೆ ನೀಡಿದೆ; ಈ ನಿಟ್ಟಿನಲ್ಲಿ ಸಾರ್ವಜನಿಕ, ಸಮುದಾಯ ಸಹಭಾಗಿತ್ವ ಹಾಗೂ ಸಹಕಾರಿ ಸಂಸ್ಥೆಗಳನ್ನು ಆರಂಭಿಸಬಹುದು.

ಕಳೆದ ಕೆಲವು ವರ್ಷಗಳಲ್ಲಿ ದೇಶದ ಕೆಲವು ರಾಜ್ಯಗಳಲ್ಲಿ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಕೇಂದ್ರ ಸರ್ಕಾರ ಈಚೆಗೆ ಮಂಡಿಸಿದ ತನ್ನ ಮುಂಗಡ ಪತ್ರದಲ್ಲಿ 3,000 ಜೆನೆರಿಕ್ ಔಷಧಿ ಕೇಂದ್ರಗಳನ್ನು ತೆರೆಯುವ ಪ್ರಸ್ತಾಪವನ್ನು ಮುಂದಿಟ್ಟಿದೆ. ಇವೆರಡೂ ಸ್ವಾಗತಾರ್ಹ ಕ್ರಮಗಳು. ಔಷಧಿಗಳು ಜನಸಾಮಾನ್ಯರ ಕೈಗೆ ಎಟುಕುವಂತಾಗಲು ಜೆನೆರಿಕ್ ಔಷಧಿಗಳಿಗೆ ಪ್ರೋತ್ಸಾಹ ನೀಡಬೇಕು; ಹಾಗೆಯೇ ಔಷಧಿ ಬೆಲೆಗಳನ್ನು ನಿಯಂತ್ರಿಸುವುದು ಮತ್ತು ಪೇಟೆಂಟ್ ವ್ಯವಸ್ಥೆಯನ್ನು ಮಾನವೀಯಗೊಳಿಸುವುದು ಕೂಡ ಅವಶ್ಯ. ಜನರಿಗೆ ಗುಣಮಟ್ಟ ಔಷಧಿಗಳಷ್ಟೇ ಸಿಗುವಂತಾಗಲು ಔಷಧಿಗಳನ್ನು ಆಗಾಗ ಪ್ರಯೋಗಶಾಲೆಗಳಲ್ಲಿ ಪರೀಕ್ಷೆಗೊಳಪಡಿಸಬೇಕು. ಆಯುರ್ವೇದ, ಯುನಾನಿ ಮತ್ತಿತರ ಪದ್ಧತಿಗಳ ಔಷಧಿಗಳನ್ನು ಗುಣಮಟ್ಟಕ್ಕೆ ಒಳಪಡಿಸಬೇಕು; ಅವುಗಳ ಪರೀಕ್ಷಾ ವಿಧಾನವನ್ನು ರೂಪಿಸಬೇಕು ಎಂದು ಎಬಿಪಿಎಸ್ ಸಲಹೆ ಮಾಡಿದೆ.

ಆರೋಗ್ಯಪೂರ್ಣ ಜೀವನಶೈಲಿ, ತಾಯಿ–ಮಗುವಿನ ಆರೋಗ್ಯ, ಅಪೌಷ್ಟಿಕತೆಯ ನಿವಾರಣೆ ಹಾಗೂ ಅಮಲು ಪದಾರ್ಥ ಸೇವನೆಯ ನಿರ್ಮೂಲನಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ತರುವ ಮೂಲಕ ಎಲ್ಲ ನಾಗರಿಕರು ರೋಗಮುಕ್ತರಾಗಬೇಕು. ಅದಕ್ಕಾಗಿ ಸ್ವಯಂಸೇವಕರು ಸೇರಿದಂತೆ ದೇಶದ ಎಲ್ಲ ನಾಗರಿಕರು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಸರ್ಕಾರ ಶ್ರಮಿಸಬೇಕೆಂದು ಎಬಿಪಿಎಸ್ ಕರೆ ನೀಡಿದೆ. ಎಲ್ಲ ಬಗೆಯ ವೈದ್ಯಕೀಯ ಸೇವೆಗಳು ಶ್ರೀಸಾಮಾನ್ಯರಿಗೆ ಸಿಗುವಂತಾಗಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೂಲ ಸವಲತ್ತು, ಸರ್ಕಾರಿ ನೀತಿಗಳು ಮತ್ತು ಕಾರ್ಯವಿಧಾನವನ್ನು ಸುಧಾರಿಸಬೇಕು. ಸಾಕಷ್ಟು ಸಂಪನ್ಮೂಲವನ್ನು ಒದಗಿಸಬೇಕು. ಅದಲ್ಲದೆ ಎಲ್ಲ ವೈದ್ಯಕೀಯ ಪದ್ಧತಿಗಳಲ್ಲಿ ಸಂಯೋಜಿತ ವಿಸ್ತರಣೆ, ನಿಯಂತ್ರಣ, ಬೋಧನೆ ಹಾಗೂ ಸಂಶೋಧನೆಗಳು ಬೆಳೆಯಬೇಕು. ಪಾರದರ್ಶಕವಾದ ನಿಯಂತ್ರಣ ವ್ಯವಸ್ಥೆ ಹಾಗೂ ಕಾನೂನುಬದ್ಧ ಕ್ರಮಗಳು ಜಾರಿಯಲ್ಲಿರಬೇಕು ಎಂದು ಹೇಳಿದೆ.

## ನಿರ್ಣಯ 2
## ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಲಭ್ಯವಿರಬೇಕು; ಕೈಗೆಟುಕಬೇಕು

ಯಾವುದೇ ರಾಷ್ಟ್ರ ಅಥವಾ ಸಮಾಜವು ಅಭಿವೃದ್ಧಿ ಹೊಂದಬೇಕಿದ್ದರೆ ಉತ್ತಮ ಶಿಕ್ಷಣವು ಅನಿವಾರ್ಯ. ಸಮಾಜ ಮತ್ತು ಸರ್ಕಾರಗಳು ಅದನ್ನು ಪೋಷಿಸಬೇಕು; ಪ್ರೋತ್ಸಾಹಿಸಬೇಕು ಮತ್ತು ಅದಕ್ಕೆ ಆಶ್ರಯ ನೀಡಬೇಕು. ಒಬ್ಬ ವಿದ್ಯಾರ್ಥಿಯ ಪೂರ್ಣ ವ್ಯಕ್ತಿತ್ವವು ವಿಕಾಸಗೊಳ್ಳಬೇಕಿದ್ದರೆ ಆತನಲ್ಲಿ ಬೀಜರೂಪದಲ್ಲಿರುವ ಗುಣಗಳು ಮತ್ತು ಸಾಮರ್ಥ್ಯಗಳು ಬೆಳೆಯಬೇಕು; ಶಿಕ್ಷಣವೇ ಅದರ ಉಪಕರಣ. ಒಂದು ಕಲ್ಯಾಣ ರಾಜ್ಯದಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಆಹಾರ, ಬಟ್ಟೆ, ವಸತಿ ಮತ್ತು ಉದ್ಯೋಗ ಒದಗಿಸುವುದರೊಂದಿಗೆ ಶಿಕ್ಷಣ ಹಾಗೂ ಆರೋಗ್ಯ ಸೇವೆಗಳನ್ನು ಪೂರೈಸುವುದು ಸರ್ಕಾರದ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ ಎಂದು ಎಬಿಪಿಎಸ್ ಗಮನ ಸೆಳೆದಿದೆ.

ಭಾರತವು ಯುವಜನತೆ ಬೃಹತ್ ಸಂಖ್ಯೆಯಲ್ಲಿರುವ ಒಂದು ರಾಷ್ಟ್ರ. ಅವರ ಸಾಮರ್ಥ್ಯ ಮತ್ತು ಆಸಕ್ತಿಗೆ ಅನುಗುಣವಾದ ಸೂಕ್ತ ಶಿಕ್ಷಣವನ್ನು ಅನಿರ್ಬಂಧಿತವಾಗಿ ಒದಗಿಸುವುದು ಸರ್ಕಾರ ಮತ್ತು ಸಮಾಜದ ಹೊಣೆಗಾರಿಕೆಯಾಗಿದೆ. ದೇಶದ ವೈಜ್ಞಾನಿಕ, ತಾಂತ್ರಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಅವರಿಗೆ ಸಾಧ್ಯವಾಗಬೇಕು. ಇಂದಿನ ಸಮಾಜದಲ್ಲಿ ಎಲ್ಲ ಹೆತ್ತವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಬಯಸುತ್ತಾರೆ. ಶಿಕ್ಷಣವನ್ನು ಪಡೆಯಲು ಬಯಸುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಕೆಯಾದಾಗ ಗುಣಮಟ್ಟದ ಶಿಕ್ಷಣವು ಕೈಗೆಟುಕಲು ಕಷ್ಟವಾಗುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಶಿಕ್ಷಣಕ್ಕೆ ಕಡಿಮೆ ಹಣದ ಮಂಜೂರಾತಿ ಹಾಗೂ ಸರ್ಕಾರದ ನೀತಿಯಲ್ಲಿ ಶಿಕ್ಷಣಕ್ಕೆ ಆದ್ಯತೆ ಸಿಗದ ಕಾರಣ ಲಾಭವೇ ಗುರಿಯಾಗಿದ್ದ ಸಂಸ್ಥೆಗಳು ಈ ಕ್ಷೇತ್ರವನ್ನು ಆಕ್ರಮಿಸಿದವು. ಈಗ ಬಡ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಪರಿಣಾಮವಾಗಿ, ಸಮಾಜದಲ್ಲಿ ಆರ್ಥಿಕ ಅಸಮಾನತೆ ಬೆಳೆಯುತ್ತಿದ್ದು, ಇದು ಇಡೀ ದೇಶಕ್ಕೆ ತೀವ್ರ ಕಳವಳದ ವಿಷಯವಾಗಿದೆ.

*2ನೇ ಪುಟಕ್ಕೆ*

*1ನೇ ಪುಟದಿಂದ...*

ಸಮಕಾಲೀನ ಶಿಕ್ಷಣ ಸಂದರ್ಭದಲ್ಲಿ ಸರ್ಕಾರಗಳು ತಮ್ಮ ಹೊಣೆಯನ್ನು ನಿರ್ವಹಿಸಲು ಮುಂದೆ ಬರಬೇಕು. ಶಿಕ್ಷಣಕ್ಕೆ ಸಾಕಷ್ಟು ಸಂಪನ್ಮೂಲವನ್ನು ಒದಗಿಸಬೇಕು ಹಾಗೂ ಸೂಕ್ತ ನೀತಿಗಳನ್ನು ರೂಪಿಸಬೇಕು. ಶಿಕ್ಷಣ ರಂಗದಲ್ಲಿ ತಲೆ ಎತ್ತಿರುವ ವಾಣಿಜ್ಯೀಕರಣವನ್ನು ಮಟ್ಟಹಾಕಬೇಕು; ಆ ಮೂಲಕ ಉತ್ತಮ ಶಿಕ್ಷಣವು ಎಲ್ಲ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು.

ಗುಣಮಟ್ಟ, ಮೂಲಸವಲತ್ತು, ಸೇವಾ ವಾತಾವರಣ, ಶುಲ್ಕ ಹಾಗೂ ಮಾನದಂಡಕ್ಕೆ ಸಂಬಂಧಿಸಿ ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾಯತ್ತೆಯ ಸ್ವಯಂನಿಯಂತ್ರಣ ವ್ಯವಸ್ಥೆಯನ್ನು ಸರ್ಕಾರ ಬಲಪಡಿಸಬೇಕು; ಅದರಿಂದ ಸರ್ಕಾರದ ನೀತಿಗಳು ಪಾರದರ್ಶಕವಾಗಿ ಜಾರಿಗೊಳ್ಳಲು ಅನುಕೂಲವಾಗುವುದು ಎಂದು ತಿಳಿಸಲಾಗಿದೆ.

ಪ್ರತಿಯೊಂದು ಮಗುವಿಗೆ ಸಮಾನ ಅವಕಾಶದ ವಾತಾವರಣದಲ್ಲಿ ಮೌಲ್ಯಾಧಾರಿತ, ರಾಷ್ಟ್ರೀಯವಾದಿ, ಉದ್ಯೋಗಪರ ಮತ್ತು ಕೌಶಲ ಆಧಾರಿತ ಶಿಕ್ಷಣ ದೊರೆಯಬೇಕು. ಸರ್ಕಾರಿ ಹಾಗೂ ಖಾಸಗಿ ಎರಡೂ ಕ್ಷೇತ್ರದ ಶಿಕ್ಷಕರ ಗುಣಮಟ್ಟ ಉತ್ತಮವಾಗಿರಬೇಕು. ಅದಕ್ಕಾಗಿ ಅವರಿಗೆ ಸೂಕ್ತ ತರಬೇತಿ ಹಾಗೂ ಉತ್ತಮ ವೇತನ ನೀಡಬೇಕು; ಅವರಲ್ಲಿ ಕರ್ತವ್ಯಪ್ರಜ್ಞೆ ಬೆಳೆಯುವಂತೆ ನೋಡಿಕೊಳ್ಳಬೇಕು.

ಸಾಮಾನ್ಯ ಜನರಿಗೆ ಕೈಗೆಟುಕುವ ರೀತಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ನಮ್ಮ ಸಮಾಜ ಹಿಂದಿನಿಂದಲೂ ಪ್ರಮುಖ ಪಾತ್ರ ವಹಿಸಿದೆ. ಇವತ್ತಿನ ಸಂದರ್ಭದಲ್ಲಿ ಕೂಡ ಎಲ್ಲ ಸಾಮಾಜಿಕ-ಧಾರ್ಮಿಕ ಸಂಸ್ಥೆಗಳು, ಉದ್ಯಮ ಸಂಸ್ಥೆಗಳು, ಶಿಕ್ಷಣತಜ್ಞರು ಹಾಗೂ ಗಣ್ಯ ವ್ಯಕ್ತಿಗಳು ಮುಂದೆ ಬಂದು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಕರೆ ನೀಡಿದೆ.

ಎಲ್ಲರಿಗೂ ಕೈಗೆಟುಕುವ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವ ಬಗ್ಗೆ ಕೇಂದ್ರ-ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯಾಡಳಿತ ಸಂಸ್ಥೆಗಳು ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಬೇಕು ಹಾಗೂ ಅಗತ್ಯವಾದ ಕಾನೂನು ವ್ಯವಸ್ಥೆಯನ್ನು ರೂಪಿಸಬೇಕು. ಶಿಕ್ಷಣಕ್ಕೆ ಸಂಬಂಧಿಸಿದ ಈ ಧ್ಯೇಯಕ್ಕಾಗಿ ಮತ್ತು ವಿಶೇಷವಾಗಿ ಗ್ರಾಮೀಣ, ಬುಡಕಟ್ಟು ಪ್ರದೇಶ ಹಾಗೂ ಹಿಂದುಳಿದ ಭಾಗಗಳಿಗೆ ಈ ಸೇವೆ ದೊರೆಯಬೇಕು. ಆ ಮೂಲಕ ಯೋಗ್ಯ, ಸಮರ್ಥ ಮತ್ತು ಜ್ಞಾನಕೇಂದ್ರಿತ ಸಮಾಜವು ನಿರ್ಮಾಣವಾಗಬೇಕು. ಅಂತಹ ಸಮಾಜ ಮಾತ್ರ ರಾಷ್ಟ್ರದ ಅಭಿವೃದ್ಧಿ ಹಾಗೂ ಉನ್ನತಿಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು ಎಂದು ಅಖಿಲ ಭಾರತ ಪ್ರತಿನಿಧಿ ಸಭಾ ನಿರ್ಣಯ ತಿಳಿಸಿದೆ.

## ನಿರ್ಣಯ 3
## ದೈನಂದಿನ ಜೀವನದಲ್ಲಿ ಸಾಮಾಜಿಕ ಸಾಮರಸ್ಯದ ಅನುಷ್ಠಾನ

ಭಾರತವು ಒಂದು ಪ್ರಾಚೀನ ರಾಷ್ಟ್ರವಾಗಿದ್ದು ಚಿಂತನ ಪ್ರಕ್ರಿಯೆಗೆ ಸಂಬಂಧಿಸಿ ಅದಕ್ಕೊಂದು ಪೂಜ್ಯ ಪರಂಪರೆಯಿದೆ. ಸಜೀವ ಮತ್ತು ನಿರ್ಜೀವ ಪ್ರಪಂಚವೆಲ್ಲವೂ ಒಂದೇ ವಸ್ತುವಿನಿಂದ ರೂಪುಗೊಂಡಿದ್ದು, ಆ ವಸ್ತು ಎಲ್ಲ ಜೀವಿಗಳಲ್ಲಿದೆ ಎಂಬುದು ನಮ್ಮ ತಿಳಿವಳಿಕೆ ಮತ್ತು ವಿಶ್ವಾಸವಾಗಿದೆ. ಎಲ್ಲ ಜೀವಿಗಳಲ್ಲಿ ಒಂದೇ ದಿವ್ಯಶಕ್ತಿಯು ಇರುವ ಕಾರಣ ಎಲ್ಲ ಮಾನವಜೀವಿಗಳು ಸಮಾನರು. ಋಷಿಗಳು, ಮುನಿಗಳು, ಸಂತರು, ಗುರುಗಳು ಮತ್ತು ಸಮಾಜ ಸುಧಾರಕರು ತಮ್ಮ ಅನುಭವ ಹಾಗೂ ನಡತೆಯ ಮೂಲಕ ಈ ಸತ್ಯವನ್ನು ಗಟ್ಟಿಗೊಳಿಸಿದ್ದಾರೆ.

ನಮ್ಮ ಸಾಮಾಜಿಕ ವ್ಯವಸ್ಥೆ ಹಾಗೂ ದೈನಂದಿನ ನಡವಳಿಕೆಗಳು ಈ ಮಹತ್ವದ ಆದರ್ಶಗಳಿಗೆ ಪೂರಕವಾಗಿದ್ದಾಗೆಲ್ಲ ಭಾರತವು ಸಮಗ್ರ, ಸಮೃದ್ಧ ಮತ್ತು ಅಜೇಯ ರಾಷ್ಟ್ರವಾಗಿ ಬೆಳೆದುಬಂದಿದೆ. ಬದುಕಿನ ಈ ಗೌರವಪೂರ್ಣ ತತ್ತ್ವಶಾಸ್ತ್ರವನ್ನು ಆಚರಿಸುವಲ್ಲಿ ಈ ಲೋಪವುಂಟಾದಾಗ ಸಮಾಜದಲ್ಲಿ ಶಿಥಿಲತೆ ಉಂಟಾಯಿತು; ಜಾತಿ ಆಧಾರಿತ ತಾರತಮ್ಯಗಳು ಹೆಚ್ಚಾದವು; ಮತ್ತು ಅಸ್ಪೃಶ್ಯತೆಯಂತಹ ಅಮಾನವೀಯ ಅನಿಷ್ಟ ಪದ್ಧತಿ ಅಸ್ತಿತ್ವಕ್ಕೆ ಬಂತು.



ಪ್ರತಿಯೊಬ್ಬ ವ್ಯಕ್ತಿ ತನ್ನ ದೈನಂದಿನ ಜೀವನದಲ್ಲಿ ವೈಯಕ್ತಿಕ, ಕುಟುಂಬ ಹಾಗೂ ಸಾಮಾಜಿಕ ಜೀವನದಲ್ಲಿ ಸಾಮರಸ್ಯದಿಂದ ನಡೆದುಕೊಳ್ಳಬೇಕು; ನಮ್ಮ ಶಾಶ್ವತ ಮತ್ತು ಕಾಲಾತೀತ ಆದರ್ಶಗಳು ಅದಕ್ಕೆ ಆಧಾರವಾಗಬೇಕು ಎಂದು ಅಭಿಪ್ರಾಯಪಟ್ಟಿದೆ. ನಮ್ಮ ಅಂತಹ ನಡವಳಿಕೆಯಿಂದ ಜಾತಿಯ ಮೇಲು ಕೀಳು, ಅಸ್ಪೃಶ್ಯತೆ ಹಾಗೂ ಪರಸ್ಪರ ಅಪನಂಬಿಕೆಗಳು ಸಮಾಜದಿಂದ ದೂರವಾಗಲಿವೆ; ಮತ್ತು ಎಲ್ಲರಿಗೂ ಶೋಷಣೆರಹಿತವಾದ ಭ್ರಾತೃತ್ವ ಹಾಗೂ ಸಾಮರಸ್ಯಗಳ ಜೀವನ ಅನುಭವಕ್ಕೆ ಬರಲಿದೆ ಎಂದು ತಿಳಿಸಿದೆ.

ರಾಷ್ಟ್ರಕ್ಕೆ ಬಲಕೊಡುವುದು ಸಮಾಜ; ಸಮಾಜದ ಶಕ್ತಿ ಜನರ ಏಕತೆ, ಉತ್ಸಾಹ, ಸಾಮರಸ್ಯ ಮತ್ತು ಭ್ರಾತೃತ್ವದ ಭಾವನೆಗಳಲ್ಲಿ ಅಡಗಿರುತ್ತದೆ. ಬಂಧುತ್ವ, ಘನತೆ ಹಾಗೂ ಸಮಾನತೆಗಳ ಆಧಾರದಲ್ಲಿ ನಾವು ನಡೆದುಕೊಳ್ಳಬೇಕು. ಯಾವುದೇ ಬಗೆಯ ತಾರತಮ್ಯದ ವರ್ತನೆ ಮತ್ತು ಅಸ್ಪೃಶ್ಯತೆಯಂತಹ ಅನಿಷ್ಟಗಳ ಮೂಲೋತ್ಪಾಟನೆ ಮಾಡಬೇಕು. ಸಮಾಜವು ನಿರಾತಂಕವಾಗಿ ನಡೆಯುವುದಕ್ಕಾಗಿ ಸಮಾಜದ ಎಲ್ಲ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳು ನಮ್ಮ ಬದುಕಿನ ಪವಿತ್ರ ಆದರ್ಶಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂದು ಅ.ಭಾ.ಪ್ರತಿನಿಧಿ ಸಭೆ ಕರೆ ನೀಡಿದೆ.

ಅನಾದಿ ಕಾಲದಿಂದ ನಮ್ಮ ಸಮಾಜದ ಹಲವು ಮಹಾನ್ ವ್ಯಕ್ತಿಗಳು ಮತ್ತು ಸಮಾಜ ಸುಧಾರಕರು ಆದರ್ಶ ಸಾಮಾಜಿಕ ಜೀವನದ ಸಮಗ್ರ ದೃಷ್ಟಿಕೋನವನ್ನು ರಾಷ್ಟ್ರಕ್ಕೆ ನೀಡಿದ್ದಾರೆ. ಕಾಲ, ದೇಶ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ವ್ಯಕ್ತಿ ಹಾಗೂ ಸಮುದಾಯದ ಮಟ್ಟದಲ್ಲಿ ಆಗುವ ಬದಲಾವಣೆಗಳನ್ನು ಅವರು ಮರೆತಿಲ್ಲ. ಸಮಾನತೆ ಹಾಗೂ ಶೋಷಣೆ ಮುಕ್ತ ವಾತಾವರಣಕ್ಕೆ ಆದ್ಯತೆ ನೀಡಿದ್ದಾರೆ. ಅವರ ಜೀವನ, ಆದರ್ಶಗಳು ಮತ್ತು ಕಾರ್ಯಗಳು ನಮ್ಮ ಸಮಾಜಕ್ಕೆ ಶಾಶ್ವತವಾದ ಸ್ಫೂರ್ತಿ ಸೆಲೆಗಳಾಗಿವೆ ಎಂದು ಎಬಿಪಿಎಸ್ ಹೇಳಿದೆ.

ಈ ಸಂದರ್ಭದಲ್ಲಿ ಸಂತರು, ಬೋಧಕರು, ಧೀಮಂತರು ಹಾಗೂ ಸಾಮಾಜಿಕ ಹೋರಾಟಗಾರರು ಸಮಾಜದ ಏಳಿಗೆಗೆ ತಮ್ಮ ಸಕ್ರಿಯವಾದ ಕೊಡುಗೆಯನ್ನು ನೀಡಬೇಕು. ಸ್ವಯಂಸೇವಕರು ಸೇರಿದಂತೆ ಎಲ್ಲ ನಾಗರಿಕರು ಸಾಮರಸ್ಯದ ನಡವಳಿಕೆಯನ್ನು ಬೆಂಬಲಿಸಬೇಕು. ಎಲ್ಲ ಸಾಮಾಜಿಕ ಹಾಗೂ ಧಾರ್ಮಿಕ (ಮತೀಯ) ಸಂಸ್ಥೆಗಳು ಸಾಮರಸ್ಯದ ಭಾವನೆಯನ್ನು ಬಲಪಡಿಸಲು ಸಾಧ್ಯವಾದ ಎಲ್ಲ ರೀತಿಯಲ್ಲಿ ಪ್ರಯತ್ನಿಸಬೇಕು ಎಂದು ಅಖಿಲ ಭಾರತ ಪ್ರತಿನಿಧಿ ಸಭಾ ಈ ನಿರ್ಣಯದ ಮೂಲಕ ಮನವಿ ಮಾಡಿದೆ.

# ನಾಲ್ಕು ಪ್ರಮುಖ ವಿಷಯಗಳ ಕುರಿತು ಸಂಘದ ನಿಲುವು

**ಮಹಿಳೆಯರು ಮತ್ತು ದೇವಸ್ಥಾನ ಪ್ರವೇಶ:** ಸಾಮಾಜಿಕ ಸ್ವಾಸ್ಥ್ಯಕ್ಕೆ ವಿರೋಧಿಗಳಾದ ಕೆಲವು ಶಕ್ತಿಗಳು ಕಳೆದ ಕೆಲವು ದಿನಗಳಲ್ಲಿ ಮಹಿಳೆಯರ ದೇವಸ್ಥಾನ ಪ್ರವೇಶ ಕುರಿತಂತೆ ಅಹಿತಕರ ವಿವಾದವನ್ನು ಹುಟ್ಟುಹಾಕಿವೆ. ಪುರಾತನ ಕಾಲದಿಂದಲೇ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ, ಪೂಜೆ ಪುನಸ್ಕಾರಗಳಲ್ಲಿ ಗಂಡು ಹೆಣ್ಣುಗಳಿಬ್ಬರೂ ಸಮಾನ ಪಾಲುದಾರರು ಎಂದು ಸಹಜವಾಗಿ ಕಾಣುವ ಉನ್ನತ ಸಂಪ್ರದಾಯವನ್ನು ನಾವು ಪಾಲಿಸಿಕೊಂಡು ಬಂದಿದ್ದೇವೆ. ದೇವಾಲಯಗಳಲ್ಲಿ ಪುರುಷರು ಮತ್ತು ಮಹಿಳೆಯರು ಎಂದು ತಾರತಮ್ಯ ಮಾಡದೇ ಎಲ್ಲರಿಗೂ ಸಮಾನ ಪ್ರವೇಶ ನೀಡಲಾಗುತ್ತದೆ. ಮಹಿಳೆಯರೂ ಸಹ ವೇದಮಂತ್ರಗಳನ್ನು ಕಲಿತು ದೇವಾಲಯಗಳಲ್ಲಿ ಅರ್ಚಕರಾಗಿ ಕಾರ್ಯನಿರ್ವಹಿಸುವ ಉದಾಹರಣೆಗಳನ್ನೂ ಕಾಣುತ್ತೇವೆ. ಆದರೆ ಕೆಲವು ಸರಿಯಲ್ಲದ ಸಂಪ್ರದಾಯಗಳಿಂದ ಒಂದಿಷ್ಟು ಸ್ಥಳಗಳಲ್ಲಿ ದೇವಸ್ಥಾನ ಪ್ರವೇಶ ಕುರಿತಂತೆ ಒಮ್ಮತ ಮೂಡುವುದು ಸಾಧ್ಯವಾಗಿಲ್ಲ. ಅಂತಹ ಸಮಸ್ಯೆಗಳಿರುವಲ್ಲಿ ಸರಿಯಾದ ಚರ್ಚೆಯ ಮೂಲಕ ಅವರ ವಿಚಾರಗಳಲ್ಲಿ ಬದಲಾವಣೆ ತಂದು ಒಮ್ಮತ ಮೂಡಿಸುವ ಪ್ರಯತ್ನ ಮಾಡಬೇಕು. ಹಾಗೆಯೇ ಇಂತಹ ಸೂಕ್ಷ್ಮ ವಿಷಯಗಳನ್ನು ರಾಜಕೀಯಗೊಳಿಸದೇ ಚರ್ಚೆ ಸಂವಾದಗಳ ಮುಖಾಂತರ ಬಗೆಹರಿಸಬೇಕು, ಚಳುವಳಿಗಳಿಂದ ಅಲ್ಲ. ಸಮಾಜ ಹಿತದೃಷ್ಟಿಯಿಂದ ಸಾಮಾಜಿಕ ಹಾಗೂ ಧಾರ್ಮಿಕ ನಾಯಕತ್ವ ದೇವಸ್ಥಾನದ ಆಡಳಿತ ಮಂಡಳಿಯ ಜೊತೆ ಸೇರಿ ಪ್ರತಿ ಹಂತದ ಮಾನಸಿಕತೆಯಲ್ಲಿ ಬದಲಾವಣೆ ತರಲು ಪ್ರಯತ್ನಿಸಬೇಕು.

**ದೇಶವಿರೋಧಿ ಶಕ್ತಿಗಳ ಗುರಿಗಳಾಗುತ್ತಿರುವ ಸುರಕ್ಷತಾ ಸಂಸ್ಥೆಗಳು:** ಕಳೆದ ಅನೇಕ ದಶಕಗಳಿಂದ ಸುರಕ್ಷತಾ ಸಂಸ್ಥೆಗಳು ಪದೇಪದೇ ಹೊಡೆತಕ್ಕೆ ಒಳಗಾಗುತ್ತಿದ್ದು ದೇಶದ ಸುರಕ್ಷತಾ ವ್ಯವಸ್ಥೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸತತವಾಗಿ ತಮ್ಮ ಶೌರ್ಯ ಪ್ರದರ್ಶಿಸುತ್ತಿರುವ ಭದ್ರತಾ ಸಂಸ್ಥೆಗಳು ನಮ್ಮ ವಿರೋಧಿಗಳು ಆಗಾಗ ನಡೆಸುವ ದಾಳಿಗಳನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿವೆ. ಪಠಾಣ್‌ಕೋಟ್ ವಾಯನೆಲೆಯ ಮೇಲಿನ ಉಗ್ರ ದಾಳಿ ಇತ್ತೀಚಿನ ನಿದರ್ಶನ. ಸುರಕ್ಷತಾ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಿ ವಿಫಲವಾಗಲು ಆಸ್ಪದ ಕೊಡದೆ ಇಂತಹ ಘಟನೆಗಳು ಮರುಕಳಿಸದಂತೆ ಮಾಡುವುದು ಅತ್ಯಗತ್ಯವಾಗಿದೆ. ಭದ್ರತಾ ದಳಗಳ ಕ್ಷಮತೆಯನ್ನು, ಶಸ್ತ್ರಾಸ್ತ್ರ ಸಾಮಗ್ರಿಗಳು, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಅಗತ್ಯ ಬದಲಾವಣೆಗಳನ್ನು ಮಾಡಬೇಕು. ಅಕ್ರಮ ವಲಸೆ, ಕಳ್ಳಸಾಗಣೆ, ಪಾಕ್ ಪ್ರೇರಿತ ಭಯೋತ್ಪಾದನೆ ಮುಂತಾದ ಚಟುವಟಿಕೆಗಳನ್ನು ಗಮನಿಸಿ ಕಟ್ಟುನಿಟ್ಟಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಈ ದೃಷ್ಟಿಯಿಂದ ಗಡಿಪ್ರದೇಶದ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಗಡಿಸುರಕ್ಷತೆ ಮತ್ತು ಅಗತ್ಯ ಸಾಮಗ್ರಿಗಳ ಪರಿಶೀಲನೆಯನ್ನು ಕಾಲಕಾಲಕ್ಕೆ ನಡೆಸಬೇಕು. ಪಾಕಿಸ್ತಾನದ ಭಾರತ ದ್ವಿಪಕ್ಷೀಯ ಸಂಬಂಧ ನೀತಿಯು ಆಯ್ಕೆಯಾದ ಸರ್ಕಾರಕ್ಕಿಂತ ಸೇನೆಯಿಂದಲೇ ನಿರ್ದೇಶವಾಗುತ್ತಿರುವಂತೆ ಗೋಚರವಾಗುತ್ತದೆ. ಮುಂಬೈಯಿಂದ ಪಠಾಣ್‌ಕೋಟ್‌ವರೆಗಿನ ದಾಳಿಗಳು ಇದನ್ನು ಪುಷ್ಟಿಗೊಳಿಸುತ್ತವೆ. ಪ್ರಸ್ತುತ ಸನ್ನಿವೇಶದಲ್ಲಿ ಇಡಿ ಜಗತ್ತು ಬೆಳೆಯುತ್ತಿರುವ ಭಯೋತ್ಪಾದಕತೆಯ ವಿಪತ್ತಿನಿಂದ ಚಿಂತಿತವಾಗಿದೆ.

**ದೇಶದಲ್ಲಿ ಬೆಳೆಯುತ್ತಿರುವ ಕೋಮುವಾದದ ಮತಿಭ್ರಮೆ:** ದೇಶದ ವಿವಿಧೆಡೆಯಲ್ಲಿ ನಡೆದ ಹಿಂಸಾಚಾರ ಮತ್ತು ಭಯೋತ್ಪಾದನಾ ದಾಳಿಯ ಘಟನೆಗಳು ದೇಶಪ್ರೇಮಿ ಹಾಗೂ ಶಾಂತಿಪ್ರಿಯ ದೇಶವಾಸಿಗಳಿಗೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ವ್ಯವಸ್ಥೆಗೆ ತುಂಬಾ ಆತಂಕ ನೀಡುವ ವಿಷಯವಾಗಿದೆ. ಪಶ್ಚಿಮ ಬಂಗಾಳದ ಮಾಲ್ಡಾದಲ್ಲಿ ನಡೆದಂತೆ ಸಣ್ಣಪುಟ್ಟ ಘಟನೆಗಳಿಗೂ ಕೆಲವು ಪ್ರದೇಶಗಳಲ್ಲಿ ಅತಿದೊಡ್ಡ ಸಂಖ್ಯೆಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದ ಜನರು ಬೀದಿಗಿಳಿಸದು ಭಯ ಗೊಂದಲದ ವಾತಾವರರಣವನ್ನು ನಿರ್ಮಾಣ ಮಾಡುವುದು ಒಂದು ಸಾಂಕ್ರಾಮಿಕವಾಗಿ ಬೆಳೆಯುತ್ತಿದೆ. ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶಮಾಡುವುದು, ಪೋಲಿಸ್ ದಳಗಳ ಮೇಲೆ ದಾಳಿ ಮಾಡಿ ಕಾನೂನನ್ನು ಗಾಳಿಗೆ ತೂರುವುದು, ಅಂಗಡಿ ವ್ಯವಹಾರ ಸ್ಥಳಗಳನ್ನು-ವಿಶೇಷವಾಗಿ ಹಿಂದೂಗಳು ನಡೆಸುವ ಅಂಗಡಿಗಳನ್ನು, ಲೂಟಿ ಮಾಡಿ ಬೆಂಕಿ ಹಚ್ಚುವುದು, ಮುಂತಾದ ಘಟನೆಗಳು ನಡೆಯುತ್ತಿವೆ. ರಾಜಕೀಯ ಪಕ್ಷಗಳು ತಮ್ಮ ತುಷ್ಟೀಕರಣದ ನೀತಿಯನ್ನು ಕೈಬಿಟ್ಟು ಇಂತಹ ಘಟನೆಗಳನ್ನು ಗಂಭಿರವಾಗಿ ಪರಿಗಣಿಸಬೇಕು ಮತ್ತು ಕಾನೂನು ವ್ಯವಸ್ಥೆಯನ್ನು ಸುಧಾರಿಸಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕು. ಆಡಳಿತ ಪಕ್ಷ ಮತ್ತು ಉಳಿದ ರಾಜಕೀಯ ಪಕ್ಷಗಳು ತುಚ್ಛ ರಾಜಕೀಯ ಹಿತಾಸಕ್ತಿಯನ್ನು ಬದಿಗಿರಿಸಿ ಸರಿಯಾದ ಮಾರ್ಗದಲ್ಲಿ ಒಟ್ಟಿಗೆ ಪ್ರಯತ್ನಿಸಿದರೆ ಮಾತ್ರ ಇದು ಸಾಧ್ಯವಾಗಬಲ್ಲದು. ಯಾವುದೇ ರಾಜಕೀಯ ಪಕ್ಷ ಅಥವಾ ನೇತಾರ ದೇಶದ ಸುರಕ್ಷೆಗಿಂತ ದೊಡ್ಡವಲ್ಲ. ದೇಶದ ಸುರಕ್ಷತೆಯ ಬಗ್ಗೆ ಜನರಲ್ಲಿ ಬಲವಾದ ವಿಶ್ವಾಸವನ್ನು ಮೂಡಿಸುವುದಕ್ಕೆ ಒಂದು ಜವಾಬ್ದಾರಿಯುತ ಸರ್ಕಾರದ ಕರ್ತವ್ಯವಾಗಿದೆ.

**ರಾಷ್ಟ್ರ ವಿರೋಧಿ ಕೃತ್ಯಗಳಿಗೆ ಕಳವಳ:** ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ದೇಶವಿರೋಧಿ ಚಟುವಟಿಕೆ, ಮೀಸಲಾತಿ ಹೆಸರಿನಲ್ಲಿ ಗುಜರಾತ್ ಹಾಗೂ ಹರ್ಯಾಣದಲ್ಲಿ ನಡೆದ ಅವಿವೇಕದ ಹಿಂಸಾಚಾರಗಳು, ದೇಶದ ಭದ್ರತಾ ಸಂಸ್ಥೆಗಳ ಮೇಲೆ ಹಾಗೂ ಯೋಧರ ಮೇಲೆ ನಡೆದ ಆಕ್ರಮಣಗಳ ಕುರಿತು ಸಂಘ ತೀವ್ರ ಕಳವಳ ವ್ಯಕ್ತಪಡಿಸಿದೆ.

ದೇಶದ ಜನತೆಯಲ್ಲಿ ಹೊಸ ಆತ್ಮವಿಶ್ವಾಸ ಮೂಡಿಸುವಲ್ಲಿ ಕೇಂದ್ರ ಸರಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಸಮಾಧಾನ ವ್ಯಕ್ತಪಡಿಸಿರುವ ಸಂಘವು, ಇದು ಇನ್ನಷ್ಟು ವ್ಯಾಪಕಗೊಳ್ಳಬೇಕಾಗಿದೆ. ದೇಶದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಭಯೋತ್ಪಾದಕರ ಪರ ಮತ್ತು ದೇಶವಿರೋಧಿ ಚಟುವಟಿಕೆಗಳು ನಡೆಯುತ್ತಿರುವುದನ್ನು ಆರೆಸ್ಸೆಸ್ ತೀವ್ರವಾಗಿ ಖಂಡಿಸುತ್ತದೆ ಹಾಗೂ ಚಟುವಟಿಕೆಗಳನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ಕೃತ್ಯಗಳ ವಿರುದ್ಧ ದೇಶದ ಕಾನೂನಿನಡಿ ಕಠಿಣ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ. ಇಂತಹ ಕೃತ್ಯಗಳು ದೇಶದ ಸಂವಿಧಾನ, ಸಂಸತ್ತು, ಕಾನೂನಿನಲ್ಲಿ ನಂಬಿಕೆ ಇಲ್ಲದವರು ಎಸಗಿದ ಕೃತ್ಯವಾಗಿದೆ. ಈವರೆಗೆ ಇಂತಹ ವಿಭಜನಕಾರಿಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳದಿರುವುದು ಇಂತಹ ಚಟುವಟಿಕೆಗಳು ನಡೆಯಲು ಕಾರಣವಾಗಿದೆ. ಇದನ್ನು ಸಹಿಸಲಾಗದು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಸಭ್ಯ ಸಂಸ್ಕೃತಿಯನ್ನು ಎತ್ತಿಹಿಡಿದು ಶೈಕ್ಷಣಿಕ ಪರಿಸರವನ್ನು ಕಾಯ್ದುಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಉತ್ತರ ಪ್ರದೇಶದ ಮುಜಾಫರ್‌ನಗರ, ಪಶ್ಚಿಮಬಂಗಾಳದ ಮಾಲ್ಡಾ ಮುಂತಾದೆಡೆಗಳಲ್ಲಿ ಹಿಂದುಗಳ ಮೇಲೆ ನಡೆದ ಮತೀಯ ಆಕ್ರಮಣ, ಹಿಂಸಾಚಾರಗಳ ಬಗ್ಗೆ ಉಲ್ಲೇಖಿಸಿದ ಅವರು, ಪೊಲೀಸ್ ಸೇರಿದಂತೆ ಭದ್ರತಾ ಪಡೆಗಳ ಮೇಲೂ ಆಕ್ರಮಣಗಳು ನಡೆಯುತ್ತಿವೆ ಎಂಬುದು ಗಂಭೀರ ಸಂಗತಿ. ಇಂತಹ ಕೃತ್ಯಗಳಿಗೆ ವೋಟ್‌ಬ್ಯಾಂಕ್ ಹಿನ್ನೆಲೆಯಲ್ಲಿ ನೀಡಲಾಗುತ್ತಿರುವ ರಾಜಕೀಯ ಕುಮ್ಮಕ್ಕನ್ನು ಹತ್ತಿಕ್ಕಬೇಕಾಗಿದೆ. ದೇಗುಲಗಳಿಗೆ ಮಹಿಳೆಯರ ಪ್ರವೇಶದ ಹೆಸರಿನಲ್ಲಿ ಕೆಲವು ಸ್ಥಾಪಿತ ಹಿತಾಸಕ್ತಿಗಳು ಎಬ್ಬಿಸಿರುವ ಗೊಂದಲವನ್ನು ಸಂಘ ಖಂಡಿಸುತ್ತದೆ. ಸಮಾಜದಲ್ಲಿನ ಕೆಲವು ಹಳೆಯ ರೂಢಿಗಳನ್ನು ಸರಿಪಡಿಸಬೇಕಾಗಿದೆ. ಇದಕ್ಕೆ ಧಾರ್ಮಿಕ, ಸಾಮಾಜಿಕ ನಾಯಕತ್ವದ ಜಂಟಿ ಪ್ರಯತ್ನ ನಡೆಯಬೇಕು.

ಸಂಪಾದಕೀಯ ಸಹಕಾರ: ಶ್ರೀಹರ್ಷಪೇರ್ಲ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ.ಎಂ., ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

# ಸುರಕ್ಷಿತ ಫೋನ್ ಬಳಕೆ




ಸ್ಮಾರ್ಟ್ ಫೋನುಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾಗುತ್ತಿರುವ ಈ ಕಾಲದಲ್ಲಿ ನಮ್ಮ ವೈಯಕ್ತಿಕವಾದ ಅನೇಕ ಮಾಹಿತಿಗಳು ಅದರಲ್ಲಿ ದಾಖಲಾಗಿರುತ್ತವೆ. ನಿಮ್ಮ ಮೊಬೈಲನ್ನು ಬಳಸುವ ಅವಕಾಶ ಸಿಕ್ಕಿತೆಂದರೆ ನಿಮ್ಮ ಬಗ್ಗೆ, ನಿಮ್ಮ ಒಡನಾಡಿಗಳ ಬಗ್ಗೆ, ನಿಮ್ಮ ಬ್ಯಾಂಕ್ ಖಾತೆ ಹೀಗೆ ಹಲವಾರು ದಾಖಲೆಗಳಿಗೆ ಅವಕಾಶ ಸಿಕ್ಕಿದಂತೆಯೇ ಸರಿ. ಇದನ್ನು ಬಳಸಿಕೊಂಡು ಹ್ಯಾಕರ್‌ಗಳು ಮಾಹಿತಿ ಕದಿಯುವ ಮತ್ತು ಖಾತೆಗೆ ಲಗ್ಗೆ ಹಾಕುವ ಕೆಲಸ ಮಾಡುತ್ತಾರೆ. ಡಿಜಿಟಲ್ ಸುರಕ್ಷತೆ ಬಗ್ಗೆ ಹೆಚ್ಚಿನ ಗಮನ ಅತ್ಯಗತ್ಯ.

ನಿಮ್ಮ ಮೊಬೈಲ್ ನಿಮ್ಮ ಇ–ಮೈಲ್ ಖಾತೆಗೆ ಲಿಂಕ್ ಆಗಿರುತ್ತದೆ. ಹಾಗಾಗಿ ನಿಮ್ಮ ಪಾಸ್–ವರ್ಡ್ ಅನ್ನು ಯಾರಿಗೂ ಕೊಡಬೇಡಿ ಮತ್ತು ಸುಲಭವಾಗಿ ಇತರರಿಗೆ ಸಿಗುವಂತೆ ಮಾಡಬೇಡಿ.

ಬ್ಯಾಂಕ್ ಉದ್ಯೋಗಿಗಳ ಹೆಸರಿನಲ್ಲಿ ನಿಮ್ಮ ಮೊಬೈಲಿಗೆ ಎಸ್.ಎಂ.ಎಸ್ ಮೂಲಕ ಬಂದ ಸಂದೇಶದಲ್ಲಿರುವ ರಹಸ್ಯ ಕೋಡ್ ಯಾರಾದರೂ ಕೇಳಿದರೆ ಅವರಿಗೆ ನೀಡಬೇಡಿ.

ಮೊಬೈಲ್ ಕಳುವಾದರೆ ತಕ್ಷಣ ನಿಮ್ಮ ಸಿಮ್ ಬ್ಲಾಕ್ ಮಾಡಿಸಿ. ಮೊಬೈಲನ್ನು ನಿಷ್ಕ್ರಿಯಗೊಳಿಸುವ ಮತ್ತು ಅದರಲ್ಲಿರುವ ಮಾಹಿತಿಗಳನ್ನು ರಕ್ಷಿಸುವ ವಿಧಾನದ ಬಗ್ಗೆ ನಾವು ಪೂರ್ವಭಾವಿಯಾಗಿ ತಿಳಿದುಕೊಂಡಿರುವುದು ಒಳ್ಳೆಯದು. ಲಭ್ಯವಿರುವ ಹೊಸ ಹೊಸ ತಂತ್ರಜ್ಞಾನಗಳನ್ನು ಬಳಸುವುದು ಕೂಡ ಮೊಬೈಲ್ ರಕ್ಷಣೆಗೆ ಇನ್ನೊಂದು ಮಾರ್ಗವಾಗಬಹುದು.

ಲಿಂಕ್ ಕ್ಲಿಕ್ ಮಾಡಿದರೆ ವಿಶೇಷ ಅವಕಾಶ ನಿಮ್ಮ ವಾಟ್ಸಾಪ್ ಖಾತೆಗೆ ಸೇರ್ಪಡೆಯಾಗುತ್ತದೆ ಎಂಬಂತಹ ಯಾವುದೇ ಸಂದೇಶಗಳನ್ನು ನಂಬಬೇಡಿ.

ನಿಮಗೆ ಲಾಟರಿ ಬಂದಿದೆ ಅಥವಾ ಭಾರೀ ಪ್ರಮಾಣದ ದುಡ್ಡನ್ನು ನಿಮ್ಮ ದೇಶಕ್ಕೆ ಕಳುಹಿಸಲು ನಿಮ್ಮ ಸಹಾಯ ಬೇಕಾಗಿದೆ ಎಂಬಂತಹ ಪ್ರಲೋಭನೆಯ ಎಸ್.ಎಂ.ಎಸ್. ಸಂದೇಶಗಳನ್ನು ನಂಬಿ ನಿಮ್ಮ ಮಾಹಿತಿ ಅವರಿಗೆ ನೀಡಬೇಡಿ.

ನಿಮ್ಮ ಪಾಸ್–ವರ್ಡ್ ಕ್ಲಿಷ್ಟವಾಗಿರಲಿ ಮತ್ತು ಅದನ್ನು ಬದಲಿಸುತ್ತಿರಿ.

ಅತ್ಯಂತ ಮಹತ್ವದ ಮಾಹಿತಿಗಳನ್ನು ಬ್ಯಾಕಪ್ ಮಾಡಿ ಇಟ್ಟುಕೊಳ್ಳಿ. ಮೊಬೈಲಿನಲ್ಲಿ ಮಾತ್ರ ಇರುವುದು ಸುರಕ್ಷಿತವಲ್ಲ.

ಯಾವುದೇ ಸಂಶಯಾಸ್ಪದ ಚಹರೆಗಳು ನಿಮ್ಮ ಮೊಬೈಲಿನಲ್ಲಿ ಕಂಡುಬಂದರೆ ಅದರಲ್ಲಿ ವೈರಸ್ ಇದೆಯೇ ಎಂದು ತಿಳಿಯಲು ಪ್ರಯತ್ನಿಸಿ. ಯಾವುದಾದರೂ antivirus ಸಾಫ್ಟ್ ವೇರ್ ಬಳಸುವುದು ಉತ್ತಮ.

ಯಾವುದೇ ಆಪ್ ಬಳಸುವ ಮೊದಲು ಅದರ ಬಗ್ಗೆ ಹುಡುಕಿ ಅದು ಸುರಕ್ಷಿತವೇ ಎಂಬುದನ್ನು ತಿಳಿದುಕೊಳ್ಳಿ. ಆಪ್‌ಗಳ ಹೆಸರಿನಲ್ಲಿ ನಿಮ್ಮ ಮಾಹಿತಿ ಕದಿಯುವ ಹ್ಯಾಕರುಗಳಿದ್ದಾರೆ.

ಇಷ್ಟೆಲ್ಲ ಮಾಡುವುದರ ಜೊತೆಗೆ ನಮ್ಮ ಎಚ್ಚರ ಯಾವಾಗಲೂ ಅಗತ್ಯ.



ಆಯುರ್ವೇದ ಔಷಧ ಪದ್ಧತಿಯ ಮಹತ್ತ್ವ ಇದೀಗ ಜಗತ್ತಿಗೆ ಅರಿವಾಗತೊಡಗಿದೆ. ಗ್ರೀಸ್ ದೇಶದ ವೈದ್ಯರೊಬ್ಬರು ತಮ್ಮ ವೈದ್ಯಕೀಯ ತಪಾಸಣೆಗೆ ಆಯುರ್ವೇದವನ್ನು ಬಳಸುತ್ತಿದ್ದಾರೆ. ತಮ್ಮ ಹದಿನೇಳರ ವಯಸ್ಸಿನಲ್ಲಿ ಸಂಸ್ಕೃತ ಅಧ್ಯಯನವನ್ನು ಮಾಡತೊಡಗಿದ ಅವರು ಗ್ರೀಕ್‌ಭಾಷೆ ಸಂಸ್ಕೃತದಿಂದ ಸಾಕಷ್ಟು ಶಬ್ದಗಳನ್ನು ಎರವಲು ಪಡೆದಿದೆ ಎಂದು ಬಲವಾಗಿ ನಂಬುತ್ತಾರೆ. ಈ ಸಂಸ್ಕೃತದ ಕಲಿಕೆ ಕ್ರಮೇಣ ಅವರನ್ನು ಆಯುರ್ವೇದಕ್ಕೆ ಆಕರ್ಷಿತರನ್ನಾಗಿ ಮಾಡಿದೆ. ಲಂಡನ್ನಿನಲ್ಲಿ ಪಾಶ್ಚಾತ್ಯರ ಔಷಧೀಯ ಕ್ರಮವನ್ನು ಸಂಶೋಧನೆಗೆ ತೆಗೆದುಕೊಂಡವರು ಈಗ ಆಯುರ್ವೇದವನ್ನೂ ಅಭ್ಯಸಿಸಿದ್ದಾರೆ. ಕೇರಳದಲ್ಲಿ ನೆಲೆಸಿರುವ ತಮ್ಮ ಗುರುಗಳನ್ನು ಆಗಾಗ್ಗೆ ಸಂಪರ್ಕಿಸಿ ಸಮಸ್ಯೆಗಳಿಗೆ ಪರಿಹಾರವನ್ನೂ ಕಂಡುಕೊಳ್ಳುತ್ತಿದ್ದಾರೆ. ಆಹಾರ, ವಿಹಾರ, ಔಷಧಗಳ ಜೊತೆಗೆ ಧ್ಯಾನ, ಯೋಗಗಳನ್ನೂ ಹೇಳಿಕೊಡುವ ಕಾಸ್ಟೊಪಾಲಸ್ ಎಂಬ ಈ ವೈದ್ಯರು ಆಯುರ್ವೇದದಿಂದಲೇ ವಾಸಿಯಾಗುವ ಕಾಯಿಲೆಗಳು ಸುಮಾರಷ್ಟಿವೆ ಎಂದು ಪ್ರತಿಪಾದಿಸುತ್ತಾರೆ.

# ದೇಶದಾದ್ಯಂತ ತಂಬಾಕು ಬಳಕೆಯಲ್ಲಿ ಇಳಿಕೆ



ರಾಷ್ಟ್ರೀಯ ಆರೋಗ್ಯ ಸಚಿವಾಲಯದ ವರದಿಯ ಪ್ರಕಾರ ದೇಶದಲ್ಲಿ ಕಳೆದ ಒಂದು ದಶಕದಲ್ಲಿ ತಂಬಾಕು ಬಳಕೆದಾರರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಆದರೆ ಕರ್ನಾಟಕ, ಮಣಿಪುರ ಮತ್ತು ಮೇಘಾಲಯ ರಾಜ್ಯಗಳಲ್ಲಿ ಮಾತ್ರ ಹೆಚ್ಚಳ ಕಂಡುಬಂದಿದೆ. ಸಚಿವಾಲಯವು 2005–06 ಸಾಲಿನಿಂದ 2015–16ನೇ ಸಾಲಿನವರೆಗೆ ತಂಬಾಕು ಬಳಕೆ ಪ್ರಮಾಣವನ್ನು ಅಂದಾಜಿಸಿ ಈ ವರದಿ ನೀಡಿದ್ದು, ದೇಶದಲ್ಲಿ ಧೂಮಪಾನ ವಿರೋಧಿ ಕರೆಗೆ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪಂದಿಸಿದ್ದಾರೆ ಎಂದು ತಿಳಿಸಿದೆ.

ಮಹಿಳೆಯರ ಸಂಖ್ಯೆ ಇಳಿಕೆ: ಸಮಾಧಾನಕರ ವಿಷಯವೆಂದರೆ, ಮಹಿಳಾ ಧೂಮಪಾನಿಗಳು ಸೇರಿದಂತೆ ತಂಬಾಕು ಬಳಕೆ ಮಾಡುವ ಮಹಿಳೆಯರ ಸಂಖ್ಯೆಯಲ್ಲಿ ಇಳಿಕೆ ದಾಖಲಾಗಿದೆ. ಜತೆಗೆ ಧೂಮಪಾನದಿಂದ ಸಂಭವಿಸುವ ಕ್ಯಾನ್ಸರ್ ಸಾವಿನ ಸಂಖ್ಯೆಯಲ್ಲೂ ಇಳಿಕೆ ಕಂಡುಬಂದಿದೆ. ಸಚಿವಾಲಯವು ವರದಿಯ ಜತೆಗೆ ಸಿಗರೇಟ್ ಉತ್ಪಾದಕ ಕಂಪನಿಗಳ ವಾರ್ಷಿಕ ವಹಿವಾಟು, ಮಾರಾಟವನ್ನೂ ಅಧ್ಯಯನ ಮಾಡಿ ಉಲ್ಲೇಖಿಸಿದ್ದು, ಅಲ್ಲಿ ಕೂಡಾ ಉತ್ಪಾದನೆ ಮತ್ತು ಮಾರಾಟದಲ್ಲಿ ಇಳಿಕೆ ದಾಖಲಾಗಿದೆ.

## ಸೇನೆಗೆ ಮತ್ತಷ್ಟು ಅಗ್ನಿಬಲ

ಸ್ವದೇಶಿ ನಿರ್ಮಿತ ಖಂಡಾಂತರ ಕ್ಷಿಪಣಿ ಅಗ್ನಿ–1ನ್ನು ಒಡಿಶಾದ ಕಡಲ ತೀರದ ಅಬ್ದುಲ್ ಕಲಾಮ್ ದ್ವೀಪ (ವ್ಹೀಲರ್ ದ್ವೀಪ)ದ ಉಡಾವಣಾ ತಾಣದಿಂದ ಯಶಸ್ವಿಯಾಗಿ ಪರೀಕ್ಷೆ ನಡೆಸಲಾಗಿದೆ. ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ಯುವ ಸಾಮರ್ಥ್ಯದ ಈ ಕ್ಷಿಪಣಿ 700 ಕಿ.ಮೀ. ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದೆ. ದೇಶದ ರಕ್ಷಣಾ ಪಡೆಗೆ ಮತ್ತಷ್ಟು ಬಲ ತುಂಬಲಿರುವ ಅಗ್ನಿ ಸರಣಿಯ ಕ್ಷಿಪಣಿಗಳ ಯಶಸ್ವಿ ಪರೀಕ್ಷಾ ಉಡಾವಣೆ ವಿಜ್ಞಾನಿಗಳ ಪ್ರಯತ್ನಕ್ಕೆ ಫಲ ನೀಡಿದೆ.

ದೇಶೀಯ ನಿರ್ಮಿತ ಅಗ್ನಿ ಸರಣಿಯ ಕ್ಷಿಪಣಿ ಇದಾಗಿದ್ದು, ಯುದ್ಧದ ಸಂದರ್ಭದಲ್ಲಿ ಪ್ರಯೋಜನಕಾರಿ. ಇದು 700 ಕಿ.ಮೀ. ದೂರವನ್ನು 9 ನಿಮಿಷ, 36 ಸೆಕೆಂಡ್‌ನಲ್ಲಿ ತಲುಪಬಲ್ಲದು. ಅತ್ಯಂತ ಸ್ಪಷ್ಟ ಮತ್ತು ನಿಖರ ಗುರಿ ಇದರ ವಿಶೇಷವಾಗಿದೆ. 12 ಟನ್ ಭಾರವಿದ್ದು, 15 ಮೀಟರ್ ಉದ್ದವಿದೆ.




ಸಿಡಿತಲೆಯನ್ನು ಒಯ್ಯಬಲ್ಲ ಸಾಮರ್ಥ್ಯದ ಅಗ್ನಿ–1 ಕ್ಷಿಪಣಿಯು 2004ರಲ್ಲಿ ಸೇನೆಗೆ ಅಧಿಕೃತವಾಗಿ ಸೇರ್ಪಡೆಯಾಗಿದೆ. ಅಗ್ನಿ–1 ಮಧ್ಯಮ ದೂರ ಕ್ರಮಿಸುವ ಕ್ಷಿಪಣಿಯಾಗಿದ್ದು, 700 ಕಿಮೀ ದೂರ ಸಾಗುತ್ತದೆ. ಇದಕ್ಕೆ ಹೆಚ್ಚುವರಿ ಪೇಲೋಡ್ ಒದಗಿಸಿದರೆ 1,200 ಕಿ.ಮೀ. ದೂರ ಸಾಗುವ ಸಾಮರ್ಥ್ಯ ದೊರೆಯುತ್ತದೆ.

ಅಗ್ನಿ–1 ಕ್ಷಿಪಣಿಯನ್ನು 1999ರಿಂದ ತಯಾರಿಸಲಾರಂಭಿಸಿ, ಅಭಿವೃದ್ಧಿಪಡಿಸಲಾಗುತ್ತಿದೆ. 2002ರ ಜನವರಿಯಲ್ಲಿ ಇದನ್ನು ಮೊದಲ ಬಾರಿಗೆ ಉಡಾಯಿಸಿ ಪರೀಕ್ಷಿಸಲಾಯಿತು. ನಂತರ 2003, 2004, 2007, 2008, 2010, 2012ರಲ್ಲಿ ಉಡಾಯಿಸಿ ಸಾಮರ್ಥ್ಯ ಪರೀಕ್ಷಿಸಲಾಗಿದೆ. ಒಂದು ಕ್ಷಿಪಣಿಗೆ ಸುಮಾರು 25–35 ಕೋಟಿ ರೂ. ವರೆಗೆ ವೆಚ್ಚವಾಗುತ್ತದೆ.

**ಉಡುಪಿ ಜಿಲ್ಲೆಯ ನಿಟ್ಟೆ ಗ್ರಾಮದ ಪ್ರತಿಷ್ಠಿತ ನಿಟ್ಟೆ ತಾಂತ್ರಿಕ ಮಹಾವಿದ್ಯಾಲಯದ ಪ್ರಯೋಗಶಾಲೆಯಿಂದ ಹೊಸ ಸಾಧನೆ ಬೆಳಕಿಗೆ ಬಂದಿದೆ. ಹೋಟೆಲುಗಳಿಂದ ಕರಿದ ಎಣ್ಣೆಯನ್ನು ಕೊಂಡು ಅದರಿಂದ ಜೈವಿಕ ಡೀಸೆಲ್ ತಯಾರಿಸುವ ಯಂತ್ರವನ್ನು ಈ ಕಾಲೇಜಿನ ಜೈವಿಕ ತಂತ್ರಜ್ಞಾನದ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ತಯಾರಿಸಿದ್ದಾರೆ. ಸಾಮಾನ್ಯವಾಗಿ ಇಂತಹ ಎಣ್ಣೆಯನ್ನು ಚಿಕ್ಕ ಅಂಗಡಿಗಳಿಗೆ, ರಸ್ತೆಬದಿಯ ಅಂಗಡಿಗಳಿಗೆ ಮಾರುವುದು ಹೋಟೆಲ್ ನಡೆಸುವವರ ವಾಡಿಕೆ. ಕರಿದ ಎಣ್ಣೆಯನ್ನು ಪುನಃ ಬಳಸುವುದು ಆರೋಗ್ಯದ ದೃಷ್ಟಿಯಿಂದಂತೂ ಒಳ್ಳೆಯದಲ್ಲ. ಅದೇ ಎಣ್ಣೆಯನ್ನು ಬಳಸಿಕೊಂಡು ಜೈವಿಕ ಡೀಸೆಲ್ ತಯಾರಿಸಿ ತಮ್ಮ ಕಾಲೇಜಿನ ಬಸ್ಸುಗಳು, ಜನರೇಟರ್‌ಗಳನ್ನು ಚಲಾಯಿಸಲು ಬಳಸಲಾಗುತ್ತಿದೆ. ಸಂಶೋಧನೆಗಳ ಪ್ರಕಾರ ಈ ಜೈವಿಕ ಡೀಸೆಲ್ ಸಾಮಾನ್ಯ ಡೀಸೆಲ್‌ಗಿಂತಲೂ ತುಸು ಹೆಚ್ಚು ಮೈಲೇಜ್ ಕೊಡುತ್ತದೆ, ಅಲ್ಲದೆ ಈ ಇಂಧನದಿಂದ ಹೊರ ಬರುವ ಹೊಗೆ ಇಂಗಾಲವನ್ನು ಹೊಂದದಿರುವುದರಿಂದ ಪರಿಸರಕ್ಕೆ ಯಾವ ಹಾನಿಯೂ ಇಲ್ಲವೆಂದು ವಿದ್ಯಾರ್ಥಿಗಳು ತೋರ್ಪಡಿಸಿದ್ದಾರೆ.**

# ಸಂಘದ ಗಣವೇಷ ಬದಲಾವಣೆ: ಚೆಡ್ಡಿ ಬದಲು ಇನ್ನು ಕಂದು ಬಣ್ಣದ ಪ್ಯಾಂಟ್




ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಸಂಘಟನೆಯಲ್ಲಿ ಸ್ವರೂಪಾತ್ಮಕ ಬದಲಾವಣೆಯೊಂದನ್ನು ಘೋಷಿಸಿದೆ.

ಇದರಂತೆ ಸಂಘ ಸ್ವಯಂಸೇವಕರಿಗೆ ಪಾರಂಪರಿಕ ಖಾಕಿ ಚೆಡ್ಡಿ ಬದಲು ಇನ್ನು ಸೊಂಟದಿಂದ ಪಾದದವರೆಗೆ ಮುಚ್ಚುವ ಕಂದು ಬಣ್ಣದ ಪ್ಯಾಂಟ್ ಸಮವಸ್ತ್ರವಾಗಿರಲಿದೆ ಎಂದು ಸಂಘದ ಸರಕಾರ್ಯವಾಹ ಸುರೇಶ್ ಭಯ್ಯಾಜಿ ಜೋಶಿ ಅವರು ತಿಳಿಸಿದರು.

ಸಂಘದ ಗುರುತು ಕೇವಲ ಗಣವೇಷದಿಂದಲ್ಲ. ಶಾರೀರಿಕ ಅಭ್ಯಾಸಗಳನ್ನೂ ಗಮನದಲ್ಲಿರಿಸಿಕೊಂಡು ಇಂತಹ ನಿರ್ಧಾರಕ್ಕೆ ಬರಲಾಗಿದೆ. ಈವರೆಗೆ, ಖಾಕಿ ಚೆಡ್ಡಿ, ಬೂದು ಬಣ್ಣದ ಬೆಲ್ಟ್, ಬಿಳಿ ಬಣ್ಣದ ಪೂರ್ಣತೋಳಿನ ಅಂಗಿ (ಮೊಣಕೈಯವರೆಗೆ ಇದನ್ನು ಮಡಚಿರಬೇಕು), ಕಪ್ಪು ಟೋಪಿ, ಕಪ್ಪು ಬೂಟು ಮತ್ತು ಖಾಕಿ ಸಾಕ್ಸ್ ಸಂಘದ ಗಣವೇಷದ ಭಾಗಗಳಾಗಿದ್ದವು. ವಿಶೇಷವಾಗಿ ಈಶಾನ್ಯ ಸೇರಿದಂತೆ ದೇಶದ ಎಲ್ಲ ಭಾಗಗಳ ಹವಾಮಾನ, ಪರಿಸರ ಇತ್ಯಾದಿ ಅಂಶಗಳನ್ನು ಪರಿಗಣಿಸಿ ವ್ಯಾಪಕವಾಗಿ ಚರ್ಚೆ, ಸಮಾಲೋಚನೆ, ಚಿಂತನೆ ನಡೆಸಿದ ಬಳಿಕ ಸಂಘ ಇಂತಹ ಒಂದು ನಿರ್ಧಾರಕ್ಕೆ ಬಂದಿದೆ ಎಂದು ಅವರು ಹೇಳಿದರು.

**ಕರ್ನಾಟಕದಲ್ಲಿ 3 ಬದಲಾವಣೆ :** ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತದ ತಂಡವನ್ನು ಪುನರ್‌ರಚಿಸಲಾಗಿದೆ. ಪ್ರಾಂತ ಸಹ ಸಂಘಚಾಲಕರಾಗಿ ಅರವಿಂದ ರಾವ್ ದೇಶಪಾಂಡೆ, ಪ್ರಾಂತ ಕಾರ್ಯವಾಹರಾಗಿ ರಾಘವೇಂದ್ರ ಕಾಗೆವಾಡ ಹಾಗೂ ಸಹ ಪ್ರಾಂತ ಪ್ರಚಾರಕರಾಗಿ ಸುಧಾಕರ ನೇಮಕಗೊಂಡಿದ್ದಾರೆ. ಆರೆಸ್ಸೆಸ್‌ನ ಕರ್ನಾಟಕ ದಕ್ಷಿಣ ಮತ್ತು ಅಖಿಲ ಭಾರತೀಯ ಪದಾಧಿಕಾರಿಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ದೇಶಪ್ರೇಮವನ್ನು ಜಾಹೀರುಪಡಿಸಲು 'ಭಾರತ್ ಮಾತಾ ಕೀ ಜೈ' ಘೋಷಣೆ ಕೂಗುವುದರಲ್ಲಿ ತಪ್ಪೇನೂ ಇಲ್ಲ ಎಂದು ಮುಸ್ಲಿಂ ಧರ್ಮಗುರುಗಳು ಅಭಿಪ್ರಾಯಪಟ್ಟಿದ್ದಾರೆ. ಘೋಷಣೆ ಕೂಗುವ ವಿವಾದ ಉದ್ದೇಶಪೂರ್ವಕ ಸೃಷ್ಟಿ ಆಗಿರುವ ಸಾಧ್ಯತೆಯಿದೆ ಎಂದು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ ಮುಖ್ಯಸ್ಥ ಪರ್ವೇಜ್ ಲಖ್ಡಾವಾಲಾ ಹೇಳಿದ್ದಾರೆ. ಮಿಲಿ ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ ಎಂ.ಎ. ಖಾಲಿದ್, ತಾಯ್ನೆಲದ ಬಗ್ಗೆ ಭಕ್ತಿ ವ್ಯಕ್ತಪಡಿಸುವುದು ಮುಸ್ಲಿಂ ವಿರೋಧಿ ನಿಲುವಲ್ಲ ಎಂದಿದ್ದಾರೆ. ಆದರೆ ಮುಸ್ಲಿಮರು 'ಭಾರತ್ ಮಾತಾ ಕೀ ಜೈ' ಘೋಷಣೆ ಕೂಗದಂತೆ ನಿರ್ಬಂಧ ಹೇರಿ ಹೈದರಾಬಾದ್‌ನ ಜಾಮಿಯಾ ನಿಜಾಮಿಯಾ ಸಂಸ್ಥೆ ಫತ್ವಾ ಹೊರಡಿಸಿದೆ. ದಾರುಲ್ ಇಫ್ತಾದ ಮುಖ್ಯಸ್ಥರೂ ಆಗಿರುವ ಮುಫ್ತಿ ಅಜೀಮುದ್ದೀನ್ ಈ ಫತ್ವಾ ಹೊರಡಿಸಿದ್ದಾರೆ. ಭೂಮಿ ಅಥವಾ ಪ್ರಾಣಿಗಳು ಮನುಷ್ಯರಿಗೆ ಜನ್ಮನೀಡಲು ಸಾಧ್ಯವಿಲ್ಲ. ಹಾಗಾಗಿ ದೇಶವನ್ನು ತಾಯಿ ಎಂದು ಸಂಬೋಧಿಸಲು ಸಾಧ್ಯವಿಲ್ಲ ಎಂದು ಫತ್ವಾದಲ್ಲಿ ಹೇಳಲಾಗಿದೆ.

# ಸಾಲುದ್ದದ ಸುದ್ದಿಗಳು

**ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಉದ್ದೇಶದಿಂದ ಸಾರ್ಕ್ ಸದಸ್ಯ ರಾಷ್ಟ್ರಗಳು ಸೇರಿದಂತೆ ಎಂಟು ದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಜೆಇಇ–ಐಐಟಿ ಪ್ರವೇಶ ಪರೀಕ್ಷೆ ನಡೆಸಲಾಗುವುದು ಎಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ತಿಳಿಸಿದರು. ಐಐಟಿಗಳಲ್ಲಿ ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುವುದರಿಂದ ಗುಣಮಟ್ಟ ಹೆಚ್ಚಾಗುತ್ತದೆ ಎಂಬ ಅಂಶವನ್ನು ಐಐಟಿ ಆಡಳಿತ ಮಂಡಳಿ ತಿಳಿಸಿದೆ ಎಂದರು.**

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-4-2016



## ಮಹಾಮಾನವ ಡಾ॥ ಬಾಬಾಸಾಹೇಬ್ ಅಂಬೇಡ್ಕರ್



**ಏಪ್ರೀಲ್ 14 ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನ. ಈ ವರ್ಷ ಸಂವಿಧಾನಶಿಲ್ಪಿ, ಯುಗಪುರುಷ ಅಂಬೇಡ್ಕರ್ ಅವರ 125ನೇ ಜನ್ಮ ವರ್ಷವೂ ಆಗಿದೆ.**

ಭಾರತ ತನ್ನ ಸುದೀರ್ಘ ವರ್ಣಮಯ ಇತಿಹಾಸದಲ್ಲಿ ಕಂಡುಕೊಂಡ ಕೆಲವೇ ಮಹಾಮೇಧಾವಿಗಳಲ್ಲಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಒಬ್ಬರು. ಮಾನವ ಸಂಕಲ್ಪಶಕ್ತಿಗೆ ಪ್ರಯತ್ನಶೀಲತೆಗೆ ಬರೆದ ಮಹಾಭಾಷ್ಯ ಅವರ ಬದುಕು. ಸಾವಿರಾರು ವರ್ಷಗಳಿಂದ ನಿರ್ದಯ ತುಳಿತಕ್ಕೊಳಗಾಗಿ ಅಜ್ಞಾನ, ಅಂಧಶ್ರದ್ಧೆ, ದಾಸ್ಯ ಮನೋಭಾವಗಳಿಂದ ಜಗತ್ತಿನ ಅನಾದರಣೆಯನ್ನುಂಡು ತಮ್ಮತನವನ್ನು ಸಂಪೂರ್ಣವಾಗಿ ಕಳೆದುಕೊಂಡು ಜೀವಂತ ಶವವಾಗಿದ್ದ ಅಸ್ಪೃಶ್ಯರಲ್ಲಿ ಹುಟ್ಟಿ, ಜೇನುಹುಳುಗಳಂತೆ ಸುತ್ತ ಮುತ್ತುತ್ತಿದ್ದ ಕಷ್ಟಕಾರ್ಪಣ್ಯಗಳ ಒಡಲಿನಲ್ಲಿಯೇ ಮೇಲು ಮೇಲಕ್ಕೆ ಬೆಳೆದು, ಗೊಮ್ಮಟ ಸದೃಶ್ಯದೀ ಶಕ್ತಿಯನ್ನು ಸಂಪಾದಿಸಿ, ಜಗನ್ಮಾನ್ಯರಾಗಿದ್ದ ಮಹಾತ್ಮಾ ಗಾಂಧಿಜೀಯವರೊಡನೆ ತತ್ವಯುದ್ಧ ಮಾಡಿ, ತನ್ನ ಜನಾಂಗಕ್ಕೆ ಜೀವ ತುಂಬಿ ಅವರ ಸರ್ವತೋಮುಖ ಉದ್ಧಾರಕ್ಕಾಗಿ ಜೀವನವಿಡೀ ಮಹಾ ಹೋರಾಟ ಮಾಡಿ ವಿಶ್ವಪ್ರಕೀರ್ತಿತರಾದ ಮಹಾವ್ಯಕ್ತಿ ಮಹಾಸಾಧಕ ಅಂಬೇಡ್ಕರ್ ಅವರು. ಅವರ ಜೀವನ ಭಾರತೀಯರೆಲ್ಲರಿಗೂ, ದೀನಸ್ಥಿತಿಯಲ್ಲಿ ದಹಿಸಿ ಹೋಗುತ್ತಿರುವ ವಿಶ್ವದ ಜನಾಂಗವೆಲ್ಲಕ್ಕೂ ಆದರ್ಶ, ಸ್ಫೂರ್ತಿದಾಯಕ. ಕ್ಷತ್ರೀಯರಾಜ ವಿಶ್ವಾಮಿತ್ರ ಬ್ರಹ್ಮರ್ಷಿಯಾದ ಪುರಾಣಕಥೆಯ ಮರುಕಳಿಕೆ. ಅವರ ಸಾಹಸಮಯ ಬದುಕು ಒಂದು ಮಹಾಕೃತಿಯ ವಸ್ತು.

ಆಳವಾದ ಅಧ್ಯಯನ ಹಾಗೂ ಅನುಭವಜನ್ಯವಾಗಿದ್ದ ಅವರ ಮಾತುಗಳಂತೂ ಮಾನವ ಜನಾಂಗಕ್ಕೆ ದಾರಿದೀಪವೇ ಆಗಿತ್ತು. ಅವರ ಕೆಲವು ಸಂದೇಶಗಳು:

- "ಮಾನವನಿಗೆ ತನ್ನ ಏಳ್ಗೆ ಸಾಧಿಸಲು ಧರ್ಮವು ಅತ್ಯಗತ್ಯ. ಕಾರ್ಲ್ ಮಾರ್ಕ್ಸ್ ಒಂದು ಹೊಸ ಪಂಥವನ್ನು ಹುಟ್ಟುಹಾಕಿದ. ಅವನ ಅನಿಸಿಕೆಯಂತೆ ಧರ್ಮದಲ್ಲಿ ಏನೂ ಇಲ್ಲ. ಅದಕ್ಕವನು ಮಹತ್ವ ನೀಡಿಯೂ ಇಲ್ಲ. ಅವನ ಮಟ್ಟಿಗೆ ಬೆಳಗ್ಗಿನ ಉಪಾಹಾರದಲ್ಲಿ ಬ್ರೆಡ್, ಬೆಣ್ಣೆ, ಕೆನೆಹಾಲು, ಕೋಳಿಯ ಕಾಲು, ಮಧ್ಯಾಹ್ನದ ಊಟದಲ್ಲಿ ಹೊಟ್ಟೆಯ ತುಂಬ ಅನ್ನ ಮತ್ತು ನಂತರ ಸೊಂಪಾದ ನಿದ್ದೆ– ಇವಿಷ್ಟು ದೊರೆತಲ್ಲಿ ಧಾರಾಳವಾಯ್ತು. ಇದು ಅವರ ಸಿದ್ಧಾಂತ. ನನಗದು ಒಪ್ಪಿಗೆಯಿಲ್ಲ.
- ಜಾತ್ಯಾತೀತ ರಾಜ್ಯವೆಂದರೆ ನಾವು ಜನರ ಧಾರ್ಮಿಕ ಭಾವನೆಗಳನ್ನು ಲೆಕ್ಕಿಸಬೇಕಾಗಿಯೇ ಇಲ್ಲ ಎಂಬುದು ಅರ್ಥವಲ್ಲ. ಜಾತ್ಯಾತೀತ ರಾಜ್ಯದ ಅರ್ಥವಿಷ್ಟೇ – ಯಾವುದೋ ಒಂದು ಮತವನ್ನು ಇತರ ಜನರ ಮೇಲೆ ಹೇರಲು ಲೋಕಸಭೆಗೆ ಅವಕಾಶವಿಲ್ಲ. ಸಂವಿಧಾನದಲ್ಲಿ ಇರುವುದು ಈ ಮಿತಿ ಮಾತ್ರ. ಜಾತ್ಯಾತೀತತೆಯ ಅರ್ಥ ಯಾವುದೇ ಮತವನ್ನು ಅಲ್ಲಗಳೆಯುವುದೆಂದಲ್ಲ. (ಸಂವಿಧಾನ ಸಮಿತಿಯಲ್ಲಿ ಚರ್ಚೆ ನಡೆಯುತ್ತಿದ್ದಾಗ ಹೇಳಿದ್ದು)
- ನಾವು ಎಲ್ಲರಂತೆಯೇ ಹಿಂದುಗಳು. ಈ ದೇವಾಲಯಗಳು ನಮ್ಮೆಲ್ಲರ ಸೊತ್ತು. ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಮಾತ್ರವಲ್ಲದೆ ನ್ಯಾಯ ದೃಷ್ಟಿಯಿಂದಲೂ ನಮಗೆ ಅದರಲ್ಲಿ ಪ್ರವೇಶಿಸುವ ಹಕ್ಕಿದೆ. ಈ ಹಿಂದೂ ಧರ್ಮವನ್ನು ಬೆಳೆಸಿದವರು ಸರ್ವಣೀಯರು ಮಾತ್ರವೇ ಅಲ್ಲ; ಅದರಲ್ಲಿ ನಮ್ಮ ಪಾಲೂ ಇದೆ.. ನಾವು ದೇವಾಲಯ ಪ್ರವೇಶ ಮಾಡಬೇಕೆನ್ನುವುದು ಆ ವಿಗ್ರಹಾರಾಧನೆಯಿಂದ ಸಂತೃಪ್ತಿ ಹೊಂದುವುದಕ್ಕಲ್ಲ; ನಮ್ಮ ಪ್ರವೇಶದಿಂದ ದೇವಾಲಯ ಕಳಂಕಿತವಾಗುವುದಿಲ್ಲ, ದೇವರು ಅಪವಿತ್ರವಾಗುವುದಿಲ್ಲ ಎಂಬುದನ್ನು ಸವರ್ಣಿಯರಲ್ಲಿ ಬಿಂಬಿಸುವುದಕ್ಕಾಗಿ ಮಾತ್ರ.

## ಆರೆಸ್ಸೆಸ್ ಶಾಖೆಗಳ ಸಂಖ್ಯೆಯಲ್ಲಿ ಹೆಚ್ಚಳ

ರಾಷ್ಟ್ರೀಯ ಸ್ವಯಂಸೇವಕ ಸಂಘದ ವ್ಯಕ್ತಿ ನಿರ್ಮಾಣದ ಕೇಂದ್ರವಾದ ಶಾಖೆಗಳ ಸಂಖ್ಯೆಯಲ್ಲಿ ದೇಶದಾದ್ಯಂತ ಹೆಚ್ಚಳ ಕಂಡುಬಂದಿದೆ. ದೇಶದ 36,867 ಸ್ಥಾನಗಳಲ್ಲಿ ಇಂದು ಸಂಘದ ಚಟುವಟಿಕೆಗಳು ನಡೆಯುತ್ತಿದ್ದು, ಕಳೆದ ವರ್ಷ ಈ ಸಂಖ್ಯೆ 33,233ರಷ್ಟಿತ್ತು. ದೈನಿಕ ಶಾಖೆಗಳ ಸಂಖ್ಯೆ 56,859ಕ್ಕೇರಿದ್ದು, ಕಳೆದ ವರ್ಷ ಇದು 51,332 ಇತ್ತು. ಸಾಪ್ತಾಹಿಕ ಮಿಲನ 13,784ಕ್ಕೇರಿದೆ. ಕಳೆದ ವರ್ಷವಿದು 12,487 ಆಗಿತ್ತು. ಮಾಸಿಕ ಮಂಡಲಿ 8226 ಆಗಿದ್ದು, ಇದು ಕಳೆದ ವರ್ಷ 9008 ಆಗಿತ್ತು

**ಅಖಿಲ ಭಾರತ ಮಟ್ಟದ ಶಾಖಾವಿಸ್ತಾರ**

| | 2014–15 | 2015–16 |
|---|---|---|
| ಸ್ಥಾನ | 33,233 | 36,867 |
| ಶಾಖೆ (ದಿನನಿತ್ಯ) | 51,332 | 56,859 |
| ಮಿಲನ್ (ವಾರಕ್ಕೊಮ್ಮೆ) | 12,487 | 13,784 |
| ಮಂಡಳಿ (ತಿಂಗಳಿಗೊಮ್ಮೆ) | 9008 | 8226 |

**ಕರ್ನಾಟಕದಲ್ಲಿ ಶಾಖಾವಿಸ್ತಾರ (2015–16)**

| | ಕರ್ನಾಟಕ ದಕ್ಷಿಣ | ಕರ್ನಾಟಕ ಉತ್ತರ | ಕರ್ನಾಟಕ (ದಕ್ಷಿಣ ಮತ್ತು ಉತ್ತರ) |
|---|---|---|---|
| ಸ್ಥಾನ | 1965 | 747 | 2712 |
| ಶಾಖೆ (ದಿನನಿತ್ಯ) | 3349 | 1086 | 4435 |
| ಮಿಲನ್ (ವಾರಕ್ಕೊಮ್ಮೆ) | 589 | 210 | 799 |
| ಮಂಡಳಿ (ತಿಂಗಳಿಗೊಮ್ಮೆ) | 379 | 207 | 586 |

- ಸಂಘ ವಿಸ್ತಾರಕರ (ಅಲ್ಪಕಾಲೀನ ಪೂರ್ಣಾವಧಿ ಕಾರ್ಯಕರ್ತರು) ಸಂಖ್ಯೆ 2014–15ರಲ್ಲಿ 7,522 ಇದ್ದುದು ಈ ಸಾಲಿನಲ್ಲಿ ದುಪ್ಪಟ್ಟಾಗಿದ್ದು ಇವರ ಸಂಖ್ಯೆ 14,592 ಆಗಿದೆ.
- ಈ ವರ್ಷ ದೇಶದಾದ್ಯಂತ 83 ಕಡೆಗಳಲ್ಲಿ ಸಂಘಶಿಕ್ಷಾ ವರ್ಗ(OTC)ಗಳು ನಡೆದಿವೆ. ಪ್ರಥಮ ವರ್ಷದ ಶಿಕ್ಷಾ ವರ್ಗದಲ್ಲಿ 17,835 ಮಂದಿ ಶಿಬಿರಾರ್ಥಿಗಳು, ದ್ವಿತೀಯ ವರ್ಷದಲ್ಲಿ 3715 ಶಿಬಿರಾರ್ಥಿಗಳು ಮತ್ತು ತೃತೀಯ ವರ್ಷದ ಶಿಕ್ಷಾವರ್ಗದಲ್ಲಿ 875 ಮಂದಿ ಪಾಲ್ಗೊಂಡಿದ್ದಾರೆ. ಮೊದಲ ವರ್ಷದ ವಿಶೇಷ ಶಿಬಿರದಲ್ಲಿ 1795 ಮಂದಿ ಮತ್ತು ಮೂರನೇ ವರ್ಷದ ವಿಶೇಷ ವರ್ಗದಲ್ಲಿ 611ಮಂದಿ ಪಾಲ್ಗೊಂಡಿದ್ದಾರೆ. ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಸಂಘದ ಪ್ರಾಥಮಿಕ ಶಿಕ್ಷಾವರ್ಗಗಳಲ್ಲಿ 33,233 ಶಾಖೆಗಳಿಂದ 1,12,520 ಸ್ವಯಂಸೇವಕರು ಪಾಲ್ಗೊಂಡಿದ್ದಾರೆ.

## ಕೇಂದ್ರ ಸರ್ಕಾರದಿಂದ ಹಾನಿಕಾರಕ ಔಷಧಕ್ಕೆ ನಿಷೇಧ




### ಯಾವ್ಯಾವ ಔಷಧಗಳು?

**ಸಾಮಾನ್ಯವಾಗಿ ಬಳಸುವ ಫೆನ್ಸಿಡಿಲ್, ಕೊರೆಕ್ಸ್ ಮುಂತಾದ ಕ–ಸಿರಪ್‌ಗಳು, ಶೀತ, ತಲೆನೋವಿಗೆ ತೆಗೆದುಕೊಳ್ಳುವ ವಿಕ್ಸ್ ಆಕ್ಷನ್ 500, ರೋಗಪ್ರತಿರೋಧಕ ಮಿಶ್ರಣ ಝಿಮ್ನಿಕ್ ಎಝೆಡ್ ಅಲ್ಲದೆ, ಸಾಮಾನ್ಯವಾಗಿ ಔಷಧೋಪಚಾರಕ್ಕೆ ಬಳಸುವ ಪ್ಯಾರಾಸಿಟಮಾಲ್, ಅಕ್ಲೋಫಿನಾಕ್, ನಿಮುಸುಲೈಡ್, ಅಮೋಕ್ಸಿಲಿನ್ ಸೈಲ್ಡೆನಾಫಿಲ್, ಅಟೋರ್ವಸ್ಟಾಟಿನ್ ಮುಂತಾದವು.**

ಜನರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುವ ಹಾನಿಕಾರಕ ಅಂಶಗಳಿರುವ ಔಷಧಗಳ ಉತ್ಪಾದನೆ ಮತ್ತು ಮಾರಾಟ ತಡೆಯುವ ನಿಟ್ಟಿನಲ್ಲಿ ಕೇಂದ್ರಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಹಾನಿಕಾರಕ ಅಂಶಗಳಿರುವ ಹಿನ್ನೆಲೆಯಲ್ಲಿ 344 ಔಷಧಗಳನ್ನು ಮಾ. 10ರಂದು ಸರ್ಕಾರ ನಿಷೇಧಿಸಿದೆ. ಇನ್ನು 500 ಔಷಧಗಳನ್ನು ನಿಷೇಧಿಸುವ ಕುರಿತು ಆರೋಗ್ಯ ಸಚಿವಾಲಯ ಚಿಂತನೆ ನಡೆಸಿದೆ. ಈ ಪೈಕಿ, ಆಂಟಿ ಬಯಾಟಿಕ್ ಹಾಗೂ ಮಧುಮೇಹ ನಿಯಂತ್ರಣ ಔಷಧಗಳೂ ಒಳಗೊಂಡಿವೆ.

6,000 ಔಷಧ ಉತ್ಪನ್ನಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ. ಈ ಪೈಕಿ 1,000ಕ್ಕೂ ಹೆಚ್ಚು ಔಷಧಗಳನ್ನು ತೀವ್ರ ತಪಾಸಣೆಗೆ ಒಳಪಡಿಸಲಾಗುತ್ತಿದೆ. 500 ಔಷಧಗಳನ್ನು ಶೀಘ್ರದಲ್ಲೇ ನಿಷೇಧಿಸುವ ಸಾಧ್ಯತೆ ಇದೆ ಎಂದು ಆರೋಗ್ಯ ಸಚಿವಾಲಯದ ತಿಳಿಸಿದೆ. ಪ್ರಾಥಮಿಕ ಹಂತದ ಸಾಕ್ಷ್ಯಗಳ ಪ್ರಕಾರ 1,000 ಔಷಧಗಳಲ್ಲಿ ಫಿಕ್ಸೆಡ್ ಡೋಸ್ ಕಾಂಬಿನೇಷನ್ (ಎಫ್‌ಡಿಸಿ/ಎರಡು ಅಥವಾ ಅದಕ್ಕಿಂತ ಹೆಚ್ಚು ಕ್ರಿಯಾಶೀಲ ಔಷಧೀಯ ಅಂಶಗಳನ್ನು ಹೊಂದಿರುವುದು) ಇರುವುದು ಕಂಡುಬಂದಿದೆ. ಹೆಚ್ಚಿನ ಪರಿಶೀಲನೆಗಾಗಿ ಇನ್ನಷ್ಟು ಮಾಹಿತಿ, ಅಂಕಿಅಂಶ ಸಂಗ್ರಹಿಸಲಾಗುತ್ತಿದೆ. 500 ಔಷಧಗಳಲ್ಲಿ ಫಿಕ್ಸೆಡ್ ಡೋಸ್ ಕಾಂಬಿನೇಷನ್ ಇರುವುದು ಖಚಿತಪಟ್ಟಿದೆ ಎನ್ನಲಾಗಿದೆ.

## ಬಹುರಾಷ್ಟ್ರೀಯ ಕಂಪೆನಿಗಳಿಗೆ ಸೆಡ್ಡು ಹೊಡೆದ ಪತಂಜಲಿ ಉತ್ಪನ್ನಗಳು

ಸ್ವದೇಶಿ ಚಳವಳಿಯ ಹರಿಕಾರ ರಾಜೀವ್ ದೀಕ್ಷಿತ್ ಅವರಿಂದ ಪ್ರೇರಣೆ ಪಡೆದ ಯೋಗಗುರು ಬಾಬಾ ರಾಮ್‌ದೇವ್ ಅವರು ಸ್ಥಾಪಿಸಿದ ಪತಂಜಲಿ ಸಂಸ್ಥೆಯ ವಹಿವಾಟು ಕಳೆದ 10 ತಿಂಗಳಲ್ಲಿ ದುಪ್ಪಟ್ಟಾಗಿದ್ದು, ಬಹುರಾಷ್ಟ್ರೀಯ ಕಂಪೆನಿಗಳಾದ ಡಾಬರ್, ಮಾರಿಕೋ ಹಾಗೂ ಗೋದ್ರೆಜ್ ವಹಿವಾಟನ್ನು ಹಿಂದಿಕ್ಕುವ ಸಾಧ್ಯತೆಯಿದೆ ಎನ್ನಲಾಗಿದೆ.




2016ರ ಜನವರಿ ತಿಂಗಳ ತನಕ ಪತಂಜಲಿ ಸಂಸ್ಥೆಯು 3,267 ಕೋಟಿ ರೂ. ವಹಿವಾಟು ನಡೆಸಿದ್ದು, ಹಿಂದಿನ ವರ್ಷದಲ್ಲಿ 1,587 ಕೋಟಿ ರೂ. ವಹಿವಾಟು ನಡೆಸಿತ್ತು. ಎರಡು ವರ್ಷಕ್ಕೆ ಹೋಲಿಸಿದರೆ ಶೇ. 106 ವಹಿವಾಟು ಏರಿಕೆಯಾಗಿದೆ ಎಂದು ರೇಟಿಂಗ್ ಏಜೆನ್ಸಿ ಬ್ರಿಕ್‌ವರ್ಕ್ ವರದಿ ಮಾಡಿದೆ. 2015ರ ಡಿಸೆಂಬರ್ ವರೆಗಿನ 9 ತಿಂಗಳಲ್ಲಿ ಮಾರಿಕೋ ಸಂಸ್ಥೆಯು 3,903 ಕೋಟಿ ರೂ. ವಹಿವಾಟು ನಡೆಸಿದ್ದರೆ, ಗೋದ್ರೇಜ್ ಸಂಸ್ಥೆಯು 3,585 ಕೋಟಿ ರೂ. ವಹಿವಾಟು ದಾಖಲಿಸಿದೆ. ದೇಶದ ಅತ್ಯಂತ ದೊಡ್ಡ ಆಯುರ್ವೇದ ಉತ್ಪನ್ನ ಸಂಸ್ಥೆಯಾದ ಡಾಬರ್ ಸಂಸ್ಥೆಯು 4,233 ಕೋಟಿ ರೂ. ವ್ಯವಹಾರ ನಡೆಸಿದ್ದು, ಪತಂಜಲಿ ಹೊರತುಪಡಿಸಿ ಉಳಿದ ಕಂಪೆನಿಗಳ ಉತ್ಪನ್ನಗಳ ಮಾರಾಟದಲ್ಲಿ ಶೇ. 8 ರಿಂದ ಶೇ. 12 ಏರಿಕೆಯಾಗಿದೆ.

**500ಕ್ಕೂ ಅಧಿಕ ಉತ್ಪನ್ನಗಳು:** ಪತಂಜಲಿ ಸಂಸ್ಥೆಯು 500ಕ್ಕೂ ಅಧಿಕ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆಗೊಳಿಸಿದೆ. ಸಂಸ್ಥೆಯ ಒಟ್ಟು ಆದಾಯದಲ್ಲಿ ಶೇ. 35 ತುಪ್ಪದಿಂದ ಬರುತ್ತಿದ್ದು, ಆರೋಗ್ಯ ಉತ್ಪನ್ನಗಳ ಮಾರಾಟದಿಂದ ಶೇ. 20 ಆದಾಯ ದೊರೆತಿದೆ. ಪ್ರತಿಸ್ಪರ್ಧಿಗಳಿಗೆ ಹೋಲಿಸಿದರೆ ಸಂಸ್ಥೆಯ ಉತ್ಪನ್ನಗಳು ಶೇ. 15 ರಿಂದ ಶೇ. 20 ಕಡಿಮೆ ಬೆಲೆ ಹೊಂದಿದ್ದು, ಉತ್ತಮ ಗುಣಮಟ್ಟ ಹೊಂದಿರುವುದರಿಂದ ಗ್ರಾಹಕರು ನಮ್ಮತ್ತ ವಾಲುತ್ತಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021 ಸಂಪಾದಕೀಯ : 97312 64009